> ಕಳೆದ ದಶಕಗಳಿಂದ ಕುಡಚಿ-ಬಾಗಲಕೋಟ ರೈಲ್ವೆ ಕಾಮಗಾರಿ ಪೂರ್ಣಗೊಳ್ಳದಿರುವುದು, ಬಾಗಲಕೋಟೆಯಿಂದ ಲೋಕಾಪೂರವರೆಗೆ ಪ್ಯಾಸೆಂಜರ್‌ರೈಲು ಪ್ರಾರಂಭಿಸಿ, ಲೋಕಾಪುರ - ಧಾರವಾಡ ಹೊಸ ರೈಲು ಮಾರ್ಗ ಅನುಷ್ಠಾನಗೊಳಿಸಬೇಕು
> • ಕುತ್ಬುದ್ದೀನ್ ಕಾಜಿ ರೈಲ್ವೆ ಹೋರಾಟ ಸಮಿತಿ ರಾಜ್ಯಾಧ್ಯಕ್ಷ

ಸುದ್ದಿ ಸಿಂಚನ

ಪ್ರವಾಸೋದ್ಯಮ: ಆತಿಥ್ಯ ಕ್ಷೇತ್ರದಲ್ಲಿ ತರಬೇತಿಗೆ ಅರ್ಜಿ

ಬಾಗಲಕೋಟೆ: ಪ್ರವಾಸೋದ್ಯಮ ಇಲಾಖೆ ಎಸ್ಸಿಎಸ್ಪಿ, ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಆತಿಥ್ಯ ಕ್ಷೇತ್ರದಲ್ಲಿ ಉಚಿತ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ತರಬೇತಿಯನ್ನು ರಾಜ್ಯ ಮತ್ತು ಕೇಂದ್ರ ಸರಕಾರದ ಫುಡ್ ಕ್ರಾಫ್ಟ್ ಇನ್ಸ್ಟ್ಯೂಟ್ (ಎಫ್ಸಿಐ) ಮೈಸೂರು ಮತ್ತು ಇನ್ಸಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜಮೆಂಟ್ ಬೆಂಗಳೂರು ಇವರ ಮೂಲಕ ವಸತಿ ಸಹಿತ ತರಬೇತಿ ನೀಡಲಾಗುತ್ತದೆ. ಆಸಕ್ತ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು ಅರ್ಜಿಗಳನ್ನು ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ ಇವರಿಗೆ ಸಲ್ಲಿಸುವಂತೆ ತಿಳಿಸಿದೆ.ಮಾಹಿತಿಗಾಗಿ ದೂಸಂ.08354-235709, 8867104114ಗೆ ಸಂಪರ್ಕಿಸಬಹುದಾಗಿದೆ.

ಇಂದಿನಿಂದ ಹೇಮರಡ್ಡಿ ಮಲ್ಲಮ್ಮಾಂಬೆ ಜಾತ್ರೆ

ಕಲಾದಗಿ: ಸಮೀಪದ ಖಜ್ಜಿಡೋಣಿಯಲ್ಲಿ ಮಹಾಸಾಧ್ವಿ ಶ್ರೀ ಹೇಮರಡ್ಡಿ ಮಲ್ಲಮ್ಮಾಂಬೆಯ ಜಾತ್ರಾ ಮಹೋತ್ಸವ ಮೇ 8 ರಿಂದ ಮೇ 10ರವರೆಗೆ ನಡೆಯಲಿದ್ದು, ಈ ನಿಮಿತ್ತ ಅನೇಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೇ 8ರಂದು ಬೆಳಗ್ಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕಳಸದ ಮೆರವಣಿಗೆ ಹಾಗೂ ವಿಶೇಷ ಪೂಜೆಯೊಂದಿಗೆ ಕಳಸಾರೋಹಣ ನೆರವೇರಲಿದೆ. ಮೇ 9ರಂದು ಬೆಳಗ್ಗೆ ಮೃತ್ಯುಂಜಯ ಹೋಮ, ರಾತ್ರಿ 9 ಗಂಟೆಗೆ ಖ್ಯಾತ ಜನಪದ ಗಾಯಕ ಗುರುರಾಜ ಹೊಸಕೋಟಿ ಹಾಗೂ ಅವರ ತಂಡದಿಂದ ಜನಪದ ರಸ ಸಂಜೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮಕ್ಕೆ ವಿಶೇಷ ಅತಿಥಿಯಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಸಿದ್ದಪ್ಪ ಬಿದರಿ ಉಪಸ್ಥಿತರಿರುವರು. ಮೇ 10ರಂದು ಬೆಳಗ್ಗೆ ಶಿವಶರಣೆ ಹೇಮರಡ್ಡಿ ಮಲ್ಲಮ್ಮಾಂಬೆ ಬೆಳ್ಳಿ ಮೂರ್ತಿಯ ಪಲ್ಲಕ್ಕಿ ಉತ್ಸವ ಹಾಗೂ ಮಧ್ಯಾಹ್ನ ಮಹಾ ಪ್ರಸಾದ, ಸಂಜೆ 7 ಗಂಟೆಗೆ ಲಕ್ಷ ದೀಪೋತ್ಸವ, ಸಂಜೆ ಮದ್ದು ಸುಡುವುದರ ಮೂಲಕ ಕಾರ್ಯಕ್ರಮ ಮಂಗಲಗೊಳ್ಳುವುದು. ರಾಜ್ಯ ಮಟ್ಟದ ಡ್ಯಾನ್ಸ್ ಸ್ಪರ್ಧೆ: ಶ್ರೀ ಹೇಮರಡ್ಡಿ ಮಲ್ಲಮ್ಮಾಂಬೆ ಜಾತ್ರಾ ಮಹೋತ್ಸವ ನಿಮಿತ್ತ ಮೇ 10ರಂದು ಸಂಜೆ 7 ಗಂಟೆಗೆ ಪ್ರಪ್ರಥಮ ಬಾರಿಗೆ ಖಜ್ಜಿಡೋಣಿ ಗ್ರಾಮದಲ್ಲಿ ರಾಜ್ಯಮಟ್ಟದ ಗ್ರುಪ ಡ್ಯಾನ್ಸ್ ಸ್ಪರ್ಧೆ ಆಯೋಜಿಸಿದ್ದು, ಪ್ರಥಮ ಬಹುಮಾನ ₹50 ಸಾವಿರ, ದ್ವಿತೀಯ ಬಹುಮಾನ ₹40 ಸಾವಿರ, ತೃತೀಯ ಬಹುಮಾನ ₹30 ಸಾವಿರ, ನಾಲ್ಕನೇ ಬಹುಮಾನ ₹20 ಸಾವಿರ ನೀಡಲಾಗುವುದು. ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸುವ ತಂಡದವರು ಆಯೋಜಕರನ್ನು ಸಂಪರ್ಕಿಸಬೇಕೆಂದು ಜಾತ್ರಾ ಮಹೋತ್ಸವ ಕಮೀಟಿಯವರು ಕೋರಿದ್ದಾರೆ.

ಅಖಿಲ ಭಾರತ ದೇವಾಂಗ (ನೇಕಾರ) ಸಮಾಜದ ಜಾಗೃತಿ ಸಮಾವೇಶ

ದಯಾನಂದ ಪುರಿ ಶ್ರೀಗಳ 36ನೇ ವರ್ಷದ ಪಟ್ಟಾಭಿಷೇಕ: ರವೀಂದ್ರ

• **ಕನ್ನಡಪ್ರಭ ವಾರ್ತೆ** ಬಾದಾಮಿ

ಸಮೀಪದ ಬನಶಂಕರಿಯಲ್ಲಿ ಮೇ 8 ಮತ್ತು 9ರಂದು ಅಖಿಲ ಭಾರತ ದೇವಾಂಗ (ನೇಕಾರ) ಜಾಗೃತಿ ಸಮಾವೇಶ-2026 ಶ್ರೀ ದಯಾನಂದ ಪುರಿ ಸ್ವಾಮೀಜಿ 36ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ದೇವಾಂಗ (ನೇಕಾರ) ಜಾಗೃತಿ ಸಮಾವೇಶದ ಸಮಿತಿ ಅಧ್ಯಕ್ಷ ರವೀಂದ್ರ ಕಲಬುರ್ಗಿ ತಿಳಿಸಿದರು.

ನಗರದ ಕಾನಿಪ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮೇ 8ರಂದು ಬೆಳಗ್ಗೆ 5 ಗಂಟೆಗೆ ಶ್ರೀ ಬನಶಂಕರಿದೇವಿಗೆ ಅಭಿಷೇಕ, 6ಗಂಟೆಗೆ ಸಣ್ಣಕ್ಕಿ ಬಾಗೂರು ಬನಶಂಕರಿದೇವಿ ಉತ್ಸವ ಮೂರ್ತಿ ಆಹ್ವಾನದೊಂದಿಗೆ ಚೌಡೇಶ್ವರಿ ದೇವಿಯ ಕತ್ತಿ ಹಬ್ಬದ ಉದ್ಘಾಟನೆಯನ್ನು ಸಂಸದ ಪಿ.ಸಿ. ಗದ್ದಿಗೌಡರ, ಶಾಸಕ ಭೀಮಸೇನ ಚಿಮ್ಮನಕಟ್ಟಿ ನೆರವೇರಿಸುವರು. ಬೆಳಗ್ಗೆ 9 ರಿಂದ 11 ಗಂಟೆಯವರೆಗೆ ಮಹಿಳೆಯರ ಕುಂಭ ಮೇಳವನ್ನು ಮಹಿಳಾ ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ, ವಿಪ ಸದಸ್ಯ ಉಮಾಶ್ರೀ ಉದ್ಘಾಟಿಸುವರು. ಮಧ್ಯಾಹ್ನ 12 ಗಂಟೆಗೆ ವೇದಿಕೆ ಕಾರ್ಯಕ್ರಮ ಆರಂಭವಾಗಲಿದ್ದು, ದಯಾನಂದಪುರಿ ಶ್ರೀ, ಬಸವರಾಜ ಪಟ್ಟದಾರ್ಯ ಶ್ರೀಗಳು ಸೇರಿದಂತೆ ಆರು ಜನ ಶ್ರೀಗಳು ಸಾನ್ನಿಧ್ಯ ವಹಿಸುವರು. ಸಮಾರಂಭವನ್ನು ಕೇಂದ್ರದ ಗ್ರಾಹಕ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ ಉದ್ಘಾಟಿಸುವರು. ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ವಚನಕಾರ ದೇವರದಾಸಿಮಯ್ಯನವರ ಇಂಗ್ಲಿಷ್ ವಚನಗಳ ಕೃತಿ ಬಿಡುಗಡೆ ಮಾಡುವರು. ರಾಜ್ಯ ಬಿಜೆಪಿ ಅಧ್ಯಕ್ಷ, ಶಾಸಕ ಬಿ.ವೈ.ವಿಜಯೇಂದ್ರ ಅವರು ದಾಸೋಹ ಭವನ 1 ಮತ್ತು 2ನೇ ಮಹಡಿ ಉದ್ಘಾಟಿಸುವರು. ಸಂಸದರಾದ ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ ಇವರು ದಾನಿಗಳಿಗೆ ಸನ್ಮಾನಿಸುವರು. ರಾಜ್ಯಸಭಾ ಸದಸ್ಯ ಕೆ.ನಾರಾಯಣ್ ಅಧ್ಯಕ್ಷತೆ ವಹಿಸುವರು.

ಮೇ 9ರಂದು ಬೆಳಗ್ಗೆ 10.30 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಆದಿ ಚುಂಚನಗಿರಿಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸೇರಿ ಇತರ ಶ್ರೀಗಳು ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭವನ್ನು ಹಾಗೂ ಶ್ರೀ ದಯಾನಂದ ಪುರಿ ಶ್ರೀಗಳು ತುಲಾಭಾರ ಕಾರ್ಯಕ್ರಮ ಉದ್ಘಾಟಿಸುವರು. ಡಿಸಿಎಂ ಡಿ.ಕೆ.ಶಿವಕುಮಾರ್ ಬನಶಂಕರಿ ಐಟಿಐ ಕಾಲೇಜು ಆವರಣದಲ್ಲಿ ಮತ್ತು ಬನಶಂಕರಿ ಶಾಖಾಮಠದ ಆವರಣದಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಅತಿಥಿ ಗೃಹಗಳ ಶಂಕುಸ್ಥಾಪನೆ ನೆರವೇರಿಸುವರು. ರಾಜ್ಯದ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಮತ್ತು ಶಿಕ್ಷಣ ಸಚಿವ ಮಧು ಬಂಗಾರಪ್ಪ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುವರು.

ಸಕ್ಕರೆ ಸಚಿವ ಶಿವಾನಂದ ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ವಸ್ತುಪ್ರದರ್ಶನ ಮಳಿಗೆಗಳನ್ನು ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ, ಸಣ್ಣ ನೀರಾವರಿ ಸಚಿವ ಎನ್.ಎಸ್. ಭೋಸರಾಜು ದಾನಿಗಳಿಗೆ ಸನ್ಮಾನಿಸುವರು. ಕಾರ್ಯಕ್ರದಲ್ಲಿ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಚಿವರು, ಮಾಜಿ ಸಚಿವರು, ಮುಖಂಡರು ಭಾಗವಹಿಸುವರು ಎಂದು ರವೀಂದ್ರ ಕಲಬುರ್ಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಟಿ ರಾಜೇಶ, ಸಂಕಣ್ಣ ಕರಡಿಗುಡ್ಡ, ಪ್ರಕಾಶ್ ಪಟ್ಟದಕಲ್ಲ, ಕಂದಗಲ್ಲ, ಮಹೇಶ್ ಶೇಬನಕಟ್ಟಿ ಪಿತಾಂಬ್ರಪ್ಪ ಹವೇಲಿ, ಬಸವರಾಜ ಕುದರಿ, ವಿಜಯಕುಮಾರ್‌ಭಾಪ್ರಿ ಉಪಸ್ಥಿತರಿದ್ದರು.



ಅಖಿಲ ಭಾರತ ದೇವಾಂಗ (ನೇಕಾರ) ಜಾಗೃತಿ ಸಮಾವೇಶ-2026 ಶ್ರೀ ದಯಾನಂದ ಪುರಿ ಸ್ವಾಮೀಜಿ 36ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭದ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆಗೊಳಿಸಿದ ಗಣ್ಯರು.

ರಜತ ಮಹೋತ್ಸವ, ನೂತನ ಕಟ್ಟಡದ ಉದ್ಘಾಟನೆ ನಾಳೆ

ಗುಳೇದಗುಡ್ಡ: ಪಟ್ಟಣದ ಬಸವೇಶ್ವರ ಪತ್ತಿನ ಸಹಕಾರಿ ಸಂಘದ 25ನೇ ವರ್ಷದ ರಜತ ಮಹೋತ್ಸವ ಹಾಗೂ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಮೇ 9ರಂದು ಸಂಜೆ 4 ಗಂಟೆಗೆ ನೂತನ ಬ್ಯಾಂಕಿನ ಆವರಣದಲ್ಲಿ ಜರುಗಲಿದೆ ಎಂದು ಅಧ್ಯಕ್ಷ ಸಂಜಯ ಬರಗುಂಡಿ ಹೇಳಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಳಕಲ್ ಗುರುಮಹಾಂತ ಶ್ರೀಗಳು, ಪಟ್ಟಣದ ಗುರುಸಿದ್ದೇಶ್ವರ ಬೃಹನ್ಮಠದ ಬಸವರಾಜ ಪಟ್ಟದಾರ್ಯ ಶ್ರೀಗಳು ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟಡ ಉದ್ಘಾಟಿಸುವರು. ಸಚಿವ ಸತೀಶ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟಿಸುವರು. ಜವಳಿ ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲ ವಾಣಿಜ್ಯ ಮಳಿಗೆಯನ್ನು, ಅಬಕಾರಿ ಸಚಿವ, ಆರ್.ಬಿ.ತಿಮ್ಮಾಪೂರ ಸೇಫ್ ಲಾಕರ್, ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ ಗಣಕಯಂತ್ರ ಉದ್ಘಾಟಿಸುವರು. ಮಾಜಿ ಸಚಿವ ಎಸ್.ಆರ್‌ಪಾಟೀಲ ರಜತ ಪರ್ವ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಶಾಸಕ ಭೀಮಸೇನ ಚಿಮ್ಮನಕಟ್ಟಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕೈಗಾರಿಕಾ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ. ನಂಜಯ್ಯನ ಮಠ, ಮಾಜಿ ಸಚಿವ ಅಜಯಕುಮಾರ ಸರನಾಯಕ, ಮಾಜಿ ಶಾಸಕ ಎಂ.ಕೆ. ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತ, ಸಹಕಾರಿ ಇಲಾಖೆ ಕಾರ್ಯದರ್ಶಿ ಸಂಜಯ ಶೆಟ್ಟೆನ್ನವರ, ವಿಶ್ವನಾಥ ಹಿರೇಮಠ, ಬೆಳಗಾವಿ ಸಹಕಾರ ಸಂಘದ ಜಂಟಿ ನಿಬಂಧಕ ಕಲ್ಲಪ್ಪ ಓಬಣ್ಣಗೋಳ, ಬಾಗಲಕೋಟೆ ಸಹಕಾರಿ ಸಂಘದ ಉಪನಿಬಂಧಕ ದಾನಯ್ಯ ಹಿರೇಮಠ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಇದೇ ವೇಳೆ ಸಹಕಾರ ಕ್ಷೇತ್ರಕ್ಕೆ ಜೀವ ತುಂಬಿದ ಮಹನೀಯರನ್ನು ಗೌರವಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಿರ್ದೇಶಕರಾದ ಚಂದ್ರಶೇಖರ ಹರವಿ, ಮುಪ್ಪಣ್ಣಪ್ಪ ಶೀಲವಂತ, ಚಂದ್ರಶೇಖರ ಪಟ್ಟಣಶೆಟ್ಟಿ, ಸಂಗಪ್ಪ ಹಡಪದ, ವಿರುಪಾಕ್ಷಪ್ಪ ಮೊರಬದ, ನಾಗಪ್ಪ ಚಿಂದಿ, ರಮೇಶ ಅಗಸಿಮನಿ, ರಾಚಣ್ಣ ಕೆರೂರು, ಬಸವರಾಜ ಬಂಡಿವಡ್ಡರ, ಮುಕೇಶ ಹುನೂರ, ಮುಖ್ಯ ಮುಖ್ಯ ಕಾರ್ಯ ಕಾರ್ಯನಿರ್ವಾಹಕ ರಮೇಶ ಹಡಪದ ಇದ್ದರು.

ಪುರಗಿರಿಯಲ್ಲಿ ದಾನಮ್ಮ ದೇವಿ ಪುರಾಣ ಮಂಗಲ, ಧಾರ್ಮಿಕ ಉತ್ಸವ 10ರಂದು

ಹುನಗುಂದ: ತಾಲೂಕಿನ ನಾಗೂರ ಸಮೀಪದ ಪುರ್ತಗೇರಿ(ಪುರಗಿರಿ) ಶ್ರೀಮಠದಲ್ಲಿ ಗುಡ್ಡಾಪುರ ದಾನಮ್ಮದೇವಿ ಪುರಾಣ ಹಾಗೂ ಜಗದ್ಗುರು ಪಂಡಿತ ಕೈಲಾಸ ಲಿಂಗ ಮಹಾಭಗವತ್ಪಾದರ ಜೀವನ ಚರಿತ್ರೆ ಪ್ರವಚನ ಮಂಗಲ ಕಾರ್ಯಕ್ರಮ ಮೇ 10ರಂದು ಸಂಜೆ 7 ಗಂಟೆಗೆ ನಡೆಯಲಿದೆ. ಇದೇ ಸಂದರ್ಭದಲ್ಲಿ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಅತ್ಯಾಚಾರಕ, ಲಿಂಗದೀಕ್ಷೆ, ಮಹಾಗಣಾರಾಧನೆ ಮತ್ತು ಪಲ್ಲಕ್ಕಿ ಉತ್ಸವ ಮುಂತಾದ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ.

ಚೌಳಹಿರಿಯೂರು ಡಾ.ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮೀಜಿ, ಚಳಗೇರಿ ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಂಕಸದೊಡ್ಡಿ ವಾಮದೇವ ಶಿವಾಚಾರ್ಯ ಸ್ವಾಮೀಜಿ, ಗುರಗುಂಟಾ ಸದಾನಂದ ಶಿವಾಚಾರ್ಯ ಸ್ವಾಮೀಜಿ, ಕೂಡ್ಲಿಗಿ ಪ್ರಶಾಂತ ಸಾಗರ ಶಿವಾಚಾರ್ಯಸ್ವಾಮೀಜಿ, ದೇವರಭೂಪರ ಗಜದಂಡ ಶಿವಾಚಾರ್ಯ ಸ್ವಾಮೀಜಿ, ಕಮತಗಿ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ, ನಿಡಶೇಷಿ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಮತ್ತು ಮಾತಾ ಮಾಣಿಕೇಶ್ವರಿ ಅಮ್ಮನವರು ಸಾನ್ನಿಧ್ಯ ವಹಿಸುವರು. ಕುಷ್ಟಗಿ ಶಾಸಕ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡಪಾಟೀಲಉದ್ಘಾಟಿಸುವರು. ಹುನಗುಂದ ಶಾಸಕ ಹಾಗೂ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಬಳ್ಳಾರಿ ಶಾಸಕ ನಾರಾ ಭರತರೆಡ್ಡಿ, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ, ಎಸ್.ಜಿ.ನಂಜಯ್ಯನಮಠ, ಅಮರೇಗೌಡ ಬಯ್ಯಾಪುರ ಮತ್ತು ಬಳ್ಳಾರಿಯ ಹಿರಿಯ ಕಾನೂನು ಅಧಿಕಾರಿ ಬಿ.ಎಸ್.ಪಾಟೀಲ ಆಗಮಿಸುವರು. ಸಾಹಿತಿ ಶರಣಪ್ಪ ಜುಗೇರಿ ಮತ್ತು ಇಳಕಲ್ ತಾಲೂಕು ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಚನ್ನಬಸಪ್ಪ ಲೆಕ್ಕಿಹಾಳ ಉಪನ್ಯಾಸ ಮಾಡುವರು.

ದ್ವಿದಳ ದಾನ್ಯ ಸಂಸ್ಕರಣೆ, ಪ್ಯಾಕೇಜಿಂಗ್ ಘಟಕ ಸ್ಥಾಪನೆಗೆ ಅರ್ಜಿ ಆಹ್ವಾನ

ಬಾಗಲಕೋಟೆ: ಜಿಲ್ಲೆಯಲ್ಲಿ 2026-27ನೇ ಸಾಲಿನ ದ್ವಿದಳ ದಾನ್ಯಗಳಲ್ಲಿ ಆತ್ಮನಿರ್ಭರತಾ ಅಭಿಯಾನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಕೊಯ್ಲೋತ್ತರ ಮೂಲಭೂತ ಸೌಕರ್ಯಾಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರಾದ ಟಿ.ಎಸ್.ರುದ್ರೇಶಪ್ಪ ತಿಳಿಸಿದ್ದಾರೆ.

ಯೋಜನೆಯಡಿ ದ್ವಿದಳ ಧಾನ್ಯಗಳ ಸಂಸ್ಕರಣೆ ಹಾಗೂ ಪ್ಯಾಕೇಜಿಂಗ್ ಘಟಕಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದ್ದು, ರೈತರ ಆದಾಯ ಹೆಚ್ಚಿಸುವುದು ಹಾಗೂ ದ್ವಿದಳ ಧಾನ್ಯಗಳಲ್ಲಿ ಮೌಲ್ಯವರ್ಧನೆ ಉತ್ತೇಜಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 60:40 ಅನುಪಾತದ ಸಹಾಯಧನದಡಿ ಯೋಜನಾ ವೆಚ್ಚದ ಶೇ.33 ರಷ್ಟು ಸಹಾಯಧನವನ್ನು (ಗರಿಷ್ಟ ₹25 ಲಕ್ಷ ಮಿತಿಯೊಂದಿಗೆ) ನೀಡಲಾಗುವುದು. ಘಟಕ ನಿರ್ಮಾಣದ ಭಾಗವಾಗಿ ಕಟ್ಟಡ, ಗೋದಾಮು ಹಾಗೂ ಸಂಗ್ರಹಣಾ ವ್ಯವಸ್ಥೆಗಳ ನಿರ್ಮಾಣಕ್ಕೆ ಅರ್ಹ ಸಹಾಯಧನದ ಮೊತ್ತದ ಗರಿಷ್ಟ ಶೇ.30ರಷ್ಟು ಹಣ ಬಳಸಿಕೊಳ್ಳಲು ಅವಕಾಶವಿದೆ.

ಈ ಯೋಜನೆಯ ಸೌಲಭ್ಯವನ್ನು ರೈತ ಉತ್ಪಾದಕ ಸಂಸ್ಥೆಗಳು, ಕ್ಲಸ್ಟರ್‌ಮಟ್ಟದ ಒಕ್ಕೂಟಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ನೋಂದಾಯಿತ ಸಂಸ್ಥೆಗಳು ಹಾಗೂ ವೈಯಕ್ತಿಕ ಫಲಾನುಭವಿ (ಯೋಜನೆ ವೆಚ್ಚದ ಶೇ.15ರಷ್ಟು ಸ್ವಂತ ಬಂಡವಾಳ ಹೂಡಿಕೆ ಮಾಡುವ ಸಾಮರ್ಥ್ಯ ಹೊಂದಿರುವುದು)ಗಳು ಪಡೆಯಲು ಅರ್ಹರು. ಆಸಕ್ತರು ತಮ್ಮ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಜೂನ್ 6 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಉಕಕ್ಕೆ ರೈಲ್ವೆ ಸೌಲಭ್ಯ ಇಲ್ಲದಿರೋದು ವಿಷಾದನೀಯ

ರೈಲ್ವೆ ಹೋರಾಟಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣ ಬೆಂಬಲ: ಮುತ್ತುರಾಜ್

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಉತ್ತರ ಕರ್ನಾಟಕಕ್ಕೆ ಅಗತ್ಯ ರೈಲ್ವೆ ಸೌಲಭ್ಯ ಇಲ್ಲದಿರುವುದು ವಿಷಾದನೀಯ ಸಂಗತಿ ಎಂದು ಕರವೇ ಜಿಲ್ಲಾಧ್ಯಕ್ಷ ಮುತ್ತುರಾಜ್ ಅರವಿಂದ್ ಶೆಟ್ಟಿ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ನಡೆದ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಉತ್ತರ ಕರ್ನಾಟಕಕ್ಕೆ ಅಗತ್ಯ ರೈಲ್ವೆ ಮಾರ್ಗಗಳಿಲ್ಲದಿರುವುದು ಹಾಗೂ ಅವಶ್ಯಕ ರೈಲ್ವೆ ಸೌಲಭ್ಯಗಳು ಇಲ್ಲದಿರುವುದು ವಿಷಾದನೀಯ. ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ರೈಲು ಅಭಿವೃದ್ಧಿ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಕುತುಬುದ್ದೀನ್ ಕಾಜಿಯವರ ನೇತೃತ್ವದ ರೈಲ್ವೆ ಹೋರಾಟಕ್ಕೆ ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು.

ರೈಲ್ವೆಹೋರಾಟಸಮಿತಿ ರಾಜ್ಯಾಧ್ಯಕ್ಷ ಕುತ್ಬುದ್ದೀನ್ ಕಾಜಿ ಮಾತನಾಡಿ, ಕಳೆದ ದಶಕಗಳಿಂದ ಕುಡಚಿ-ಬಾಗಲಕೋಟ ರೈಲ್ವೆ ಕಾಮಗಾರಿ ಪೂರ್ಣಗೊಳ್ಳದಿರುವುದು, ಬಾಗಲಕೋಟೆಯಿಂದ ಲೋಕಾಪೂರವರೆಗೆ ಪ್ಯಾಸೆಂಜರ್‌ರೈಲು ಪ್ರಾರಂಭಿಸಿ, ಲೋಕಾಪುರ - ಧಾರವಾಡ ಹೊಸ ರೈಲು ಮಾರ್ಗ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು.

ನಮ್ಮ ಉತ್ತರ ಕರ್ನಾಟಕ ಭಾಗದ ಜನರು ಸಾವಿರಾರು ಸಂಖ್ಯೆಯಲ್ಲಿ ಗೋವಾಕ್ಕೆ ದುಡಿಯಲು ಹೋಗುತ್ತಾರೆ. ಅವರ ಅನುಕೂಲಕ್ಕಾಗಿ ಉತ್ತರ ಕರ್ನಾಟಕದಿಂದ ರೈಲ್ವೆ ಸಂಪರ್ಕ ಕಲ್ಪಿಸುವುದು ಅತ್ಯವಶ್ಯಕವಾಗಿದೆ. ಬಿಜಾಪುರ ಬಾಗಲಕೋಟೆ ಜಿಲ್ಲೆಗಳ ಭಕ್ತಾದಿಗಳಿಗೆ ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಅನುಕೂಲ ಆಗುವಂತೆ ರೈಲ್ವೆ ಸಂಪರ್ಕ ಕಲ್ಪಿಸುವುದು ಸೇರಿದಂತೆ ಅನೇಕ ಬೇಡಿಕೆಗಳಿಗೆ ಆಗ್ರಹಿಸಿ ಮುಂಬರುವ ದಿನಗಳಲ್ಲಿ ವಿನೂತನವಾದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು.

ಬಾಗಲಕೋಟೆ - ಕುಡಚಿ ರೈಲ್ವೆ ಮಾರ್ಗಕ್ಕೆ ಒಳಪಡುವ ಲೋಕಾಪುರ, ಮುಧೋಳ, ಮಹಾಲಿಂಗಪುರ, ಜಮಖಂಡಿ, ರಬಕವಿ, ಬನಹಟ್ಟಿ, ತೇರದಾಳ, ಹಾರೂಗೇರಿ ಮತ್ತು ಕುಡಚಿ ಪಟ್ಟಣಗಳು ಸೇರಿದಂತೆ ಕರ್ನಾಟಕದ ವಿವಿಧ ಸಂಘ - ಸಂಸ್ಥೆಗಳು, ಜನಪರ ಸಂಘಟನೆಗಳು ಪ್ರಗತಿ ಪರ ಚಿಂತಕರು ಈ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲ ನೀಡಬೇಕು ಎಂದು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಕಳೆದ 35 ವರ್ಷಗಳಿಂದ ನಿರಂತರವಾಗಿ ಜನಪರ, ಅಭಿವೃದ್ಧಿ ಪರ ಹೋರಾಟಗಳನ್ನು ಮಾಡುತ್ತಿರುವ ಕುತ್ಬುದ್ದಿನ್ ಕಾಜಿಯವರಿಗೆ ಕರ್ನಾಟಕ ರಕ್ಷಣಾ ವೇದಿಕೆಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ರಾಜ್ಯ ಉಪಾಧ್ಯಕ್ಷ ಬಸವರಾಜ್ ತಾಳಿಕೋಟಿ, ತಿಪ್ಪಣ್ಣ ಮೇಟಿ, ಗೋವಾದವರಾದ ಮಂಜುನಾಥ್ ನಾಟಿಕರ್, ಬಸು ಗೌಡರ್‌ಹುಬ್ಬಳ್ಳಿ ಮಂಜುನಾಥ್ ಲೋತಿಮಠ, ಗದಗಿನ ತಿಪ್ಪಣ್ಣ ದೋಣಿ, ಪ್ರಭು ಹಳ್ಳೂರ್, ಪ್ರಶಾಂತ್ ವಾಲಿ, ರವಿ ಗುಳಸಂಗಿ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಕಳೆದ 35 ವರ್ಷಗಳಿಂದ ನಿರಂತರವಾಗಿ ಜನಪರ, ಅಭಿವೃದ್ಧಿ ಪರ ಹೋರಾಟಗಳನ್ನು ಮಾಡುತ್ತಿರುವ ಕುತ್ಬುದ್ದಿನ್ ಕಾಜಿಯವರಿಗೆ ಕರ್ನಾಟಕ ರಕ್ಷಣಾ ವೇದಿಕೆಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಸಾಹಿತ್ಯ-ಶಿಕ್ಷಣ-ಸಮಾಜ ಸೇವೆಯ ಸಮನ್ವಯ ಸಾಧಕ

ಪುತ್ತೂರು ಉಮೇಶ್ ನಾಯಕ್

ಪುತ್ತೂರು ಉಮೇಶ್ ನಾಯಕ್ ಅವರು ಸಾಹಿತ್ಯ, ಶಿಕ್ಷಣ ಹಾಗೂ ಸಮಾಜ ಸೇವಾ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಬಹುಮುಖ ವ್ಯಕ್ತಿತ್ವ. ಚಿಂತನೆ, ಕ್ರಿಯಾಶೀಲತೆ ಮತ್ತು ಮಾನವೀಯ ಸೇವಾಭಾವದ ಮೂಲಕ ಪುತ್ತೂರು ತಾಲೂಕು ಮಾತ್ರವಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ವಿಶಿಷ್ಟ ಗುರುತನ್ನು ನಿರ್ಮಿಸಿಕೊಂಡಿರುವ ಅವರು, ಸಮಾಜದ ವಿವಿಧ ಹಂತಗಳ ಮೇಲೆ ಸ್ಪಷ್ಟವಾದ ಸಕಾರಾತ್ಮಕ ಪ್ರಭಾವ ಬೀರಿರುವ ಸೇವಾ ಸಾಧಕರು.



ಪ್ರಸ್ತುತ ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಅವರು, ಕಳೆದ ನಾಲ್ಕು ವರ್ಷಗಳಿಂದ ತಾಲೂಕಿನ 32 ಗ್ರಾಮಗಳಲ್ಲಿ ಪ್ರತಿಮಾಸವೂ ಮಕ್ಕಳ ಸಾಹಿತ್ಯ ಸಮ್ಮೇಳನದ ಸ್ವರೂಪದ ಗ್ರಾಮ ಸಾಹಿತ್ಯ ಸಂಭ್ರಮ ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ಗ್ರಾಮ ಸಾಹಿತ್ಯ ಸಂಭ್ರಮದಲ್ಲಿ ವಿದ್ಯಾರ್ಥಿ ಕವಿ ಗೋಷ್ಠಿ ಜೊತೆಗೆ ವಿನೂತನ ಪ್ರಯೋಗಗಳಾದ ಬಾಲಕಥಾಗೋಷ್ಠಿ, ಪ್ರವಾಸ ಕಥನ ಲೇಖನ, ನನ್ನ ಆಪ್ತಮಿತ್ರ ಲೇಖನ, ನನ್ನ ನೆಚ್ಚಿನ ಶಿಕ್ಷಕ ಲೇಖನ ಗೋಷ್ಠಿಗಳನ್ನು ಅಳವಡಿಸಿಕೊಂಡು ಯುವ ಜನತೆಯನ್ನು ಸಾಹಿತ್ಯ ಕ್ಷೇತ್ರದತ್ತ ಬರಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. 250ಕ್ಕೂ ಹೆಚ್ಚು ವಿವಿಧ ಕ್ಷೇತ್ರಗಳ ಸಾಧಕರನ್ನು ಗ್ರಾಮ ಮಟ್ಟದಲ್ಲಿ ಗುರುತಿಸಿ ಗೌರವಿಸಿದ್ದಾರೆ. 100ಕ್ಕೂ ಅಧಿಕ ಹೊಸ ಕೃತಿಗಳ ಪ್ರಕಟಣೆಗೆ ಮಾರ್ಗದರ್ಶನ ನೀಡಿ ಉದಯೋನ್ಮುಖ ಸಾಹಿತಿಗಳಿಗೆ ಬೆಂಬಲ ನೀಡಿದ್ದಾರೆ.

ಪುತ್ತೂರು ತಾಲೂಕಿನಲ್ಲಿ ಸುಮಾರು 20 ವರ್ಷಗಳಿಂದ ನಿಂತುಹೋದ ಕರ್ನಾಟಕ ರಾಜ್ಯೋತ್ಸವದ ಕನ್ನಡ ಭುವನೇಶ್ವರಿಯ ಭವ್ಯ ಮೆರವಣಿಗೆಯನ್ನು ಪುತ್ತೂರಿನ ಶಾಸಕರಾದ ಅಶೋಕ್ ರೈ ಯವರ ಮಾರ್ಗದರ್ಶನದಲ್ಲಿ ಸುಮಾರು 50ಕ್ಕೂ ಹೆಚ್ಚು ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಪುನರಾರಂಭಿಸಿ, ರಾಜ್ಯೋತ್ಸವದ ಅಂಗವಾಗಿ ನಡೆಯುವ ಸನ್ಮಾನವನ್ನು ತಾಲೂಕು ರಾಜ್ಯೋತ್ಸವ ಪ್ರಶಸ್ತಿ ಸ್ವರೂಪಕ್ಕೆ ತಂದ ಪ್ರಮುಖ ವ್ಯಕ್ತಿ. ಜಿಲ್ಲೆಯಲ್ಲಿ ತಾಲೂಕು ಮಟ್ಟದಲ್ಲಿ ರಾಜ್ಯೋತ್ಸವ ಪ್ರಶಸ್ತಿ ವ್ಯವಸ್ಥಿತವಾಗಿ ನಡೆಯುತ್ತಿರುವುದು ಪುತ್ತೂರಿನಲ್ಲಿ ಮಾತ್ರ ಎನ್ನುವುದು ಗಮನಾರ್ಹ.



ಕನ್ನಡಪ್ರಭ ಮತ್ತು ಸುವರ್ಣ ನ್ಯೂಸ್ ವತಿಯಿಂದ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ 'ಸುವರ್ಣ ಕನ್ನಡಿಗ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕನ್ನಡದಲ್ಲೂ ಐಎಎಸ್ ಬರೆಯಿರಿ' ಅಭಿಯಾನ

ಶಿಕ್ಷಣ ಕ್ಷೇತ್ರದಲ್ಲಿ ಇವರ ಕೊಡುಗೆ ವಿಶೇಷವಾಗಿದೆ. ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಭವಿಷ್ಯವನ್ನು ಗಮನದಲ್ಲಿರಿಸಿ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಐಎಎಸ್ ಅಧಿಕಾರಿಗಳಾಗಬೇಕೆಂಬ ಮಹಾದಾಸೆಯಿಂದ ಕನ್ನಡದಲ್ಲೂ ಐಎಎಸ್ ಪರೀಕ್ಷೆ ಬರೆಯಿರಿ ಎಂಬ ಅಭಿಯಾನವನ್ನು ಆರಂಭಿಸಿ, 200ಕ್ಕೂ ಅಧಿಕ ಐಎಎಸ್- ಐಪಿಎಸ್ ಹಾಗೂ ತತ್ಸಮಾನ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮಾಹಿತಿ ಕಾರ್ಯಗಾರಗಳನ್ನು ಕನ್ನಡದಲ್ಲೇ ನಡೆಸಿ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಅರಿವನ್ನುಂಟು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಗ್ರಾಮಮಟ್ಟದಲ್ಲಿ ಸಾಹಿತ್ಯ ಸಂಭ್ರಮ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಜಾಗೃತಿ ಕಾರ್ಯಕ್ರಮಗಳನ್ನು ಸಂಯೋಜಿತವಾಗಿ ನಡೆಸಿರುವುದು ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ತು ಇತಿಹಾಸದಲ್ಲೇ ವಿನೂತನ ಪ್ರಯತ್ನವಾಗಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಅವರು ಸಾಧಕ ಲೇಖಕರಾಗಿಯೂ ಗುರುತಿಸಿಕೊಂಡಿದ್ದಾರೆ. ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಂಕ್ಷಿಪ್ತ ಸ್ಥಳಪುರಾಣವಾದ ಸ್ವಯಂಭೂ ಮಹಾಲಿಂಗೇಶ್ವರ ಕೃತಿಯನ್ನು ರಚಿಸಿದ್ದು, ಈ ಕೃತಿ ಧಾರ್ಮಿಕ ದತ್ತಿ ಇಲಾಖೆಯಿಂದ ಪ್ರಕಟವಾಗಿದೆ. ಇದಲ್ಲದೆ ಇನ್ನೂ ಮೂರು ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ನಿರ್ಗತಿಕರ ಪುನರ್ವಸತಿ ಸೇವೆ: ಪುತ್ತೂರು ಉಮೇಶ್ ನಾಯಕ್ ಅವರ ಸೇವಾ ಬದುಕಿನ ಅತ್ಯಂತ ಸ್ಪರ್ಶಕ ಅಧ್ಯಾಯವೆಂದರೆ ನಿರ್ಗತಿಕರು, ಭಿಕ್ಷುಕರು ಮತ್ತು ಅನಾಥರ ಪುನರ್ವಸತಿ ಕಾರ್ಯ. ಕಳೆದ ಹತ್ತು ವರ್ಷಗಳಲ್ಲಿ 100ಕ್ಕೂ ಅಧಿಕ ನಿರ್ಗತಿಕರನ್ನು ಪುನರ್ವಸತಿ ಕೇಂದ್ರಗಳಿಗೆ ಸೇರಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಸಂಕಲ್ಪದೊಂದಿಗೆ ಅವರಿಗೆ ಹೊಸ ಬದುಕಿನ ಆಶಾಕಿರಣ ನೀಡಿದ್ದಾರೆ. ವಿಶೇಷವಾಗಿ ಎಚ್‌ಐವಿ ಪೀಡಿತ ಓರ್ವ ಮಹಿಳೆ ಹಾಗೂ ಇಬ್ಬರು ಮಕ್ಕಳನ್ನು ರಕ್ಷಿಸಿ, ಅವರಿಗೆ ವೈದ್ಯಕೀಯ ನೆರವು, ಆಶ್ರಯ ಮತ್ತು ವಿದ್ಯಾಭ್ಯಾಸದ ವ್ಯವಸ್ಥೆ ಕಲ್ಪಿಸಿರುವುದು ಇವರ ಮಾನವೀಯತೆಯ ಮಾದರಿಯಾಗಿದೆ.

ಗೌರವಗಳು :

ಇವರ ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಸಮಾಜಮುಖಿ ಸೇವೆಗಳನ್ನು ಗುರುತಿಸಿ 2020ರಲ್ಲಿ ರೋಟರಿ ಅನ್ಸಂಗ್ ಹೀರೋ ಪ್ರಶಸ್ತಿ ಹಾಗೂ 2025ರಲ್ಲಿ ಪುತ್ತೂರು ತಾಲೂಕು ಗಣರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇತ್ತೀಚೆಗೆ ಕನ್ನಡಪ್ರಭ ಏಷಿಯಾನೆಟ್ ಸುವರ್ಣನ್ಯೂಸ್ನ ಸುವರ್ಣ ಕನ್ನಡಿಗ' ಪ್ರಶಸ್ತಿಗೆ ಭಾಜನರಾಗಿದ್ದು, ಇವರ ಸಮಾಜಸೇವೆಗೆ ದೊರೆತ ಮುಕುಟವಾಗಿದೆ.

ತಮ್ಮ ಒಡಹುಟ್ಟಿದ ಡೌನ್ ಸಿಂಡ್ರೋಮ್ ಸಹೋದರ ಸುರೇಶ್ ನಾಯಕ್ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ಹಾಗೂ ಅವರಿಗೆ ಜಾದೂ ಪ್ರರ್ಶನ ಕಲಿಸಿ ಅವರ ಪ್ರತಿಭೆಯನ್ನು ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದಾರೆ. ಅವರು ದೇಶದಾದ್ಯಂತ ಇದುವರೆಗೆ 500ಕ್ಕೂ ಅಧಿಕ ಉಚಿತ ಪ್ರದರ್ಶನಗಳ ಮೂಲಕ ಬುದ್ಧಿಮಾಂದ್ಯತಾ ಜನಜಾಗೃತಿಯನ್ನು ಮೂಡಿಸಿದ್ದಾರೆ. ಉಡುಪಿಯ ಡೌನ್ ಸಿಂಡ್ರೋಮ್ ಈಜುಗಾರ್ತಿ ಅರ್ಚನಾ ಜೈ ವಿಠ್ಠಲ್, ಮೈಸೂರಿನ ದಿವ್ಯಾಂಗ ಕೀ ಬೋರ್ಡ್ ಕಲಾವಿದ ಶ್ರೀ ಗಣೇಶ್ ಭಟ್ ಹಾಗೂ ಡೌನ್ ಸಿಂಡ್ರೋಮ್ ಜಾದೂಗಾರ ಸುರೇಶ ನಾಯಕ್ ಇವರಿಗೆ ವಿಶ್ವ ಅಂಗವಿಕಲ ದಿನಾಚರಣೆಯ ರಾಷ್ಟ್ರಪತಿಗಳ ರಾಷ್ಟ್ರ ಪ್ರಶಸ್ತಿ ದೊರಕುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಪ್ರಸ್ತುತ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿ ಶ್ರೀರಾಮ್ ಶೇರ್ಸ್ ಅಂಡ್ ಫೈನಾನ್ಷಿಯಲ್ ಕನ್ಸಲ್ಟೆಂಟ್ ಎಂಬ ಸಂಸ್ಥೆಯ ಆಡಳಿತ ನಿರ್ದೇಶಕರಾಗಿದ್ದು, ಈ ಸಂಸ್ಥೆಯ ಮೂಲಕ ಶೇರು ಉದ್ಯಮವನ್ನು ನಡೆಸುತ್ತಿದ್ದಾರೆ. ಪತ್ನಿ ರೂಪಶ್ರೀ ನಾಯಕ್, ಪುತ್ರ ಸಾತ್ವಿಕ್ ನಾಯಕ್ ಹಾಗೂ ಸಹೋದರ ಸುರೇಶ್ ನಾಯಕ್ ಹಾಗೂ ಪೋಷಕರೊಂದಿಗೆ ಪುತ್ತೂರಿನಲ್ಲಿ ವಾಸವಾಗಿದ್ದಾರೆ (ದೂರವಾಣಿ: 9844401295).

ಕನ್ನಡಪ್ರಭ
ಶುಕ್ರವಾರ 8.05.2026

ಗರಿಷ್ಠ 40°C | ಕನಿಷ್ಠ 25°C

ಸುದ್ದಿ ಸಿಂಚನ

ನೇಕಾರರಿಗೆ ಮುದ್ರಾ ಯೋಜನೆ ಸಾಲಸೌಲಭ್ಯ

ಬಾಗಲಕೋಟೆ: ಕೈಮಗ್ಗ ಮತ್ತು ಜವಳಿ ಇಲಾಖೆ 2026-27ನೇ ಸಾಲಿಗೆ ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ಕೈಮಗ್ಗ ನೇಕಾರರಿಗೆ ದುಡಿಮೆ ಬಂಡವಾಳ ಸಾಲ ಒದಗಿಸುವ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಜಿಲ್ಲೆಯ ಕೈಮಗ್ಗ ನೇಕಾರರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಒದಗಿಸಲಾಗುತ್ತದೆ. ಈ ಯೋಜನೆಯಡಿ ಶೇ. 6ರ ಬಡ್ಡಿ ದರದಲ್ಲಿ ಕೈಮಗ್ಗ ನೇಕಾರರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಒದಗಿಸಲಾಗುತ್ತದೆ. ಬ್ಯಾಂಕಿವರು ವಿಧಿಸುವ ಸಾಲದ ಮೇಲಿನ ಗರಿಷ್ಠ ಬಡ್ಡಿದರ ಶೇ.7ನ್ನು ಸಾಲ ಮಂಜೂರಾದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಕೇಂದ್ರ ಸರ್ಕಾರ ಬಡ್ಡಿ ಸಹಾಯಧನವಾಗಿ ನೀಡಲಿದೆ. ಸಾಲದ ಮೊಬಲಗಿನ ಶೇ.20 ಗರಿಷ್ಠ ₹10 ಸಾವಿರ ಮಾರ್ಜಿನ ಮನಿ ಹಣವನ್ನು ಸಾಲ ವಿತರಿಸಿದ ಬ್ಯಾಂಕಿನ ವ್ಯವಸ್ಥಾಪಕರು ಜಿಲ್ಲೆಯ ನೋಡಲ್ ಕಚೇರಿ ಪಂಜಾಬ್ ನ್ಯಾಷನಲ್ ಬ್ಯಾಂಕಿನ ಮೂಲಕ ಪಡೆಯಬಹುದಾಗಿದೆ. ಈ ಯೋಜನೆಯಡಿ ಗರಿಷ್ಠ ₹50 ಸಾವಿರ ಸಾಲ ಒದಗಿಸಲಾಗುತ್ತದೆ. ಸಾಲ ಪಡೆಯಲು ಉದ್ದೇಶಿಸಿರುವ ಕೈಮಗ್ಗ ನೇಕಾರರು ಅರ್ಜಿಗಳನ್ನು ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬಾಗಲಕೋಟೆ ಕಚೇರಿಯಿಂದ ಪಡೆದು ಮೇ 30 ರೊಳಗಾಗಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. ಮಾಹಿತಿಗಾಗಿ ದೂಸಂ.08354-235463ಗೆ ಸಂಪರ್ಕಿಸಬಹುದಾಗಿದೆ.

ಸರಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಬಾದಾಮಿ: ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ವತಿಯಿಂದ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯು ಪರೀಕ್ಷೆಗಳಲ್ಲಿ ಶೇ. 90ಕ್ಕೂ ಅಧಿಕ ಅಂಕ ಪಡೆದು ಉತ್ತೀರ್ಣರಾದ ರಾಜ್ಯದ ಸರಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.ತಿ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಅರ್ಹ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ http://powermedia.info ಲಿಂಕ್ ಮೂಲಕ ಆನ್ ಲೈನ್ ನಲ್ಲಿ ಮೇ 25ರೊಳಗೆ ಅರ್ಜಿ ಸಲ್ಲಿಸಬಹುದು. ತಾಲೂಕಿನ ಅರ್ಹ ಸರಕಾರಿ ನೌಕರರ ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ರಾಜ್ಯ ಸರಕಾರಿ ನೌಕರರ ಸಂಘದ ತಾಲೂಕು ಘಟಕದ ಅಧ್ಯಕ್ಷ ಡಾ.ಎಂ.ಎನ್. ಸಿದ್ದಲಿಂಗಪ್ಪನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶುಲ್ಕ ಮರುಪಾವತಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬಾಗಲಕೋಟೆ: ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2025-26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ಶುಲ್ಕ ಮರುಪಾವತಿ ಕಾರ್ಯಕ್ರಮ ಸೌಲಭ್ಯಕ್ಕಾಗಿ ಆನ್ಲೈನ್ ಮೂಲಕ ಸಲ್ಲಿಸುವ ಅರ್ಜಿ ಅವಧಿಯನ್ನು ಮೇ 16ವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಜಲಾಶಯ ಮಟ್ಟ

ಆಲಮಟ್ಟಿ
- ಗರಿಷ್ಠ ಮಟ್ಟ..................519.60ಮೀ.
- ಇಂದಿನ ಮಟ್ಟ................509.49ಮೀ.
- ಒಳಹರಿವು.....................ಇಲ್ಲ
- ಹೊರಹರಿವು..................1,597ಕ್ಯು

ಘಟಪ್ರಭಾ
- ಗರಿಷ್ಠ ಮಟ್ಟ................2175.00ಮೀ.
- ಇಂದಿನ ಮಟ್ಟ............2110.850ಮೀ.
- ಒಳಹರಿವು.....................ಇಲ್ಲ
- ಹೊರಹರಿವು..................142ಕ್ಯು



ಜಮಖಂಡಿ ವಕೀಲರ ಸಂಘದ ನೂತನ ಅಧ್ಯಕ್ಷ ಎ.ಪಿ.ಕುಲಕರ್ಣಿ, ಉಪಾಧ್ಯಕ್ಷೆ ವಿಜಯಲಕ್ಷ್ಮೀ ಭಟ್, ಪ್ರ.ಕಾರ್ಯ ದರ್ಶಿ ವೈ.ಬಿ.ಕಡಪಟ್ಟಿ, ಸಹಾಯಕ ಕಾರ್ಯದರ್ಶಿ ಎಸ್.ಎ.ಅಂಬಿ, ಸದಸ್ಯರಾಗಿ ಆರ್.ಆರ್.ಕರೋಶಿ, ಆರ್.ಎಂ.ಝುಂಡೆ, ಎಸ್.ಕೆ. ಗೌಡಪ್ಪನವರ, ಯು.ಎಸ್.ಚರಕಿ, ಎಸ್.ಕೆ.ದಳವಾಯಿ, ಮಹಿಳಾ ಸದಸ್ಯರಾಗಿ ಜೆ.ಆರ್. ಮಾಳಿ, ವಿ.ಜಿ.ಅಳ್ಳಿಕಟ್ಟಿ ಅವರನ್ನು ಕಾಂಗ್ರೆಸ್ ಮುಖಂಡ ತೌಫೀಕ ಪಾರತನಳ್ಳಿ ಸನ್ಮಾನಿಸಿದರು. ವಕೀಲ ಡಾ.ಮಲ್ಲಿಕಾರ್ಜುನ ಮಠ ಇತರರು ಇದ್ದರು.



ಕಲಾದಗಿ: ಸಮೀಪದ ಖಜ್ಜಿಡೋಣಿ ಗ್ರಾಮಕ್ಕೆ ಗುರುವಾರ ತಾಪಂ ಇಒ ಸುಭಾಸ ಸಂಪಗಾವಿ ಭೇಟಿ ನೀಡಿ ನರೇಗಾ ಕಾಮಗಾರಿ ವೀಕ್ಷಣೆ ಮಾಡಿ ಕೂಲಿ ಕಾರ್ಮಿಕರ ಆರೋಗ್ಯ, ಯೋಗಕ್ಷೇಮ ವಿಚಾರಿಸಿ ಕುಂದು ಕೊರತೆ ಆಲಿಸಿದರು. ಕಾರ್ಮಿಕರ ಹಾಜರಾತಿ, ಕಾಮಗಾರಿಯ ನೈಜತೆ ಪರಿಶೀಲಿಸಿದರು. ಗ್ರಾಪಂ ಪಿಡಿಒ ಎಸ್.ಎ.ಕ್ಯಾದಿಗೇರಿ, ಐಇಸಿ ಈರಣ್ಣ ಮಾಸ್ತಿ, ಬಿಎಫ್ಟಿಗಳಾದ ಮಂಜುನಾಥ ಮಾದಿಹಾಳ, ಸುಭಾಸ ಮುರನಾಳ, ಯಮುನಪ್ಪ ಬಸವನಾಯಕ ಹಾಗೂ ಸಿಬ್ಬಂದಿ ಇದ್ದರು.

ಬದುಕು ಮತ್ತು ಬೆವರು ಕೃತಿಗೆ ದತ್ತಿ ಪ್ರಶಸ್ತಿ

ರಬಕವಿ-ಬನಹಟ್ಟಿ: ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನ ಬೀಳಗಿ ದತ್ತಿ ಪ್ರಶಸ್ತಿಗೆ ರಾಮಪುರದ ನಿವೃತ್ತ ಅರ್ಥಶಾಸ್ತ್ರ ಉಪನ್ಯಾಸಕರು, ಹಿರಿಯ ಸಾಹಿತಿ ಎಂ.ಎಸ್. ಬದಾಮಿ ಅವರ ಬದುಕು



ಮತ್ತು ಬೆವರು ಕೃತಿ ಆಯ್ಕೆ ಮಾಡಿದೆ. ಬದಾಮಿಯವರು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ 46ಕ್ಕೂ ಅಧಿಕ ಕೃತಿಬರೆದಿದ್ದಾರೆ. ವಿವಿಧ ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶಕರು, ಮಾರ್ಗದರ್ಶಕರೂ ಆಗಿದ್ದಾರೆ. ಹಿರಿಯ ಸಾಹಿತಿಗಳಾದ ಸಿದ್ಧರಾಜ ಪೂಜಾರಿ, ಮಲ್ಲಿಕಾರ್ಜುನ ಹುಲಗಬಾಳಿ,ಶಿವಾನಂದ ದಾಶ್ಯಾಳ, ಮೃತ್ಯುಂಜಯ ರಾಮದುರ್ಗ, ಶಿವಾನಂದ ಬಾಗಲಕೋಟಮಠ, ಕನ್ನಡ ಸಾಹಿತ್ಯ ಪರಿಷತ್ತು ರಬಕವಿ-ಬನಹಟ್ಟಿ ತಾಲೂಕು ಘಟಕದ ಅಧ್ಯಕ್ಷರಾದ ಮ.ಕೃ. ಮೇಗಾಡಿ, ಚಿದಾನಂದ ಸೊಲ್ಲಾಪೂರ, ಚಂದ್ರಪ್ರಭ ಬಾಗಲಕೋಟ, ಮಲ್ಲಿಕಾರ್ಜುನ ಜವಳಗಿ, ಉದ್ಯಮಿ ಬಸವರಾಜ ದಲಾಲ, ಶಿವಜಾತ ಉಮದಿ, ಸೋಮಶೇಖರ್ ಕೊಟ್ರಶೆಟ್ಟಿ, ದಾನಪ್ಪ ಆಸಂಗಿ ಇತರರು ಅಭಿನಂದಿಸಿದ್ದಾರೆ.

ಸಾರಿಗೆ ಘಟಕಕ್ಕೆ ಬೀಗ ಜಡಿದು ಕರವೇ ಪ್ರತಿಭಟನೆ

ರಸ್ತೆ ಸಾರಿಗೆ ಸಂಸ್ಥೆ ಹುನಗುಂದ ಘಟಕ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಗೆ ತೀವ್ರ ಆಕ್ರೋಶ



• **ಕನ್ನಡಪ್ರಭ ವಾರ್ತೆ** ಹುನಗುಂದ

ಹುನಗುಂದ ಪಟ್ಟಣದ ಬಗ್ಗೆ ಸಾರಿಗೆ ಸಂಸ್ಥೆ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕದ ಕಾರ್ಯಕರ್ತರು ಬುಧವಾರ ಪಟ್ಟಣದ ಸಾರಿಗೆ ಘಟಕಕ್ಕೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಹುನಗುಂದಸಾರಿಗೆಘಟಕಪ್ರಾರಂಭವಾಗಿದ್ದರೂ ನ್ಯಾಯುತವಾಗಿ ಸಿಗಬೇಕಾದ ಸಾರಿಗೆ ಮಾರ್ಗಗಳು ಸಿಕ್ಕಿಲ್ಲ. ಹೊಸ ಮಾರ್ಗಗಳಲ್ಲಿ ಬಸ್ ಓಡಿಸುತ್ತಿಲ್ಲ. ಸಿಬ್ಬಂದಿ ಕೊರತೆ ಸಮಸ್ಯೆಯೂ ಅತಿಯಾಗಿದೆ. ಈ ಎಲ್ಲದರ ಕುರಿತು ಹುನಗುಂದ ನಾಗರಿಕ ಸೇವಾ ಸಮಿತಿ ನಿರಂತರ ಪತ್ರ ವ್ಯವಹಾರ ಮಾಡಿದರೂ ಸಂಸ್ಥೆಯಅಧಿಕಾರಿಗಳುಸ್ಪಂದಿಸುತ್ತಿಲ್ಲ. ಅನಿವಾರ್ಯವಾಗಿ ಈಗ ಬೀಗ ಹಾಕಿ ಪ್ರತಿಭಟನೆ ಮಾಡುವ ಸ್ಥಿತಿ ಬಂದಿದೆ ಎಂದು ಕರವೇ ತಾಲೂಕು ಘಟಕದ ಅಧ್ಯಕ್ಷ ರೋಹಿತ ಬಾರಕೇರ ಆರೋಪಿಸಿದರು.

ಹುನಗುಂದ ಮತ್ತು ಬದಾಮಿ ಘಟಕಗಳಿಂದ ಗುಡೂರ ಮಾರ್ಗವಾಗಿ ಬದಾಮಿ-ಹುನಗುಂದ ಬಸ್ ಸೇವೆ ಆರಂಭಿಸುವ ಗಜೇಂದ್ರಗಡ ಮತ್ತು ಲಿಂಗಸೂರ ಘಟಕಗಳಿಂದ ಇಳಕಲ್‌ಗೆ ಬರುವ ಎಲ್ಲ ಬಸ್‌ಗಳನ್ನು ಹುನಗುಂದವರೆಗೆ ಮುಂದುವರಿಸುವ ಬೇಡಿಕೆ ಬೇಡಿಕೆಯಾಗಿಯೇ ಉಳಿದಿದೆ. ಗಂಗಾವತಿಯಿಂದ ವಿಜಯಪುರಕ್ಕೆ ಚಲಿಸುವ ಕೆಲವು ಬಸ್‌ಗಳು ಹುನಗುಂದ ಪಟ್ಟಣಕ್ಕೆ ಬರದೇ ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ಪ್ರಯಾಣಿಕರನ್ನು ಇಳಿಸಿ ಹೋಗುತ್ತಿದ್ದಾರೆ. ಇದರಿಂದ ರಾತ್ರಿ ಸಮಯದಲ್ಲಿ ಮಹಿಳೆಯರು ಮತ್ತು ಮಕ್ಕಳು ಒಂದು ಕಿಮೀ ನಡೆದು ಬರುವ ಸ್ಥಿತಿ ನಿರ್ಮಾಣವಾಗಿದೆ. ಡಿಲಕ್ಸ್, ಐರಾವತ್ ಸಾರಿಗೆ ಸೇರಿ ಸಂಸ್ಥೆಯ ಅವತಾರ ಬುಕಿಂಗ್ ಆ್ಯಪ್‌ನಲ್ಲಿ ಹುನಗುಂದ ಪಟ್ಟಣದ ಹೆಸರೇ ಇಲ್ಲ. ಇವೆಲ್ಲವೂ ಸೇರಿ ಹುನಗುಂದ ಪಟ್ಟಣದಿಂದ ಆರಂಭಿಸಬೇಕಾದ ನೂತನ ಮಾರ್ಗಗಳ ಕುರಿತು ಪ್ರತಿಭಟನಾಕಾರರು ಒತ್ತಾಯಿಸಿದರು.

ಸ್ಥಳಕ್ಕಾಗಮಿಸಿದ ಘಟಕ ವ್ಯವಸ್ಥಾಪಕ ಅರವಿಂದ ಭಜಂತ್ರಿ, ಮೇಲಧಿಕಾರಿಗಳ ಗಮನಕ್ಕೆ ತಂದು ಬೇಡಿಕೆ ಈಡೇರಿಸುವ ಭರವಸೆ ನೀಡಿದರಾದರೂ ಪ್ರತಿಭಟನಾಕಾರರು ಒಪ್ಪಲಿಲ್ಲ. ಘಟಕ ಆರಂಭವಾದಾಗಿನಿಂದಲೂ ಈ ಬೇಡಿಕೆಗಳಿದ್ದು, ಅಧಿಕಾರಿಗಳು ಈಡೇರಿಸಿಲ್ಲ. ವಿಭಾಗೀಯ ನಿಯಂತ್ರಣಾಧಿಕಾರಿಗಳು ಸ್ಥಳಕ್ಕಾಗಿಮಸುವವರೆಗೆ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಘಟಕ ವ್ಯವಸ್ಥಾಪಕರು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಪ್ರತಿಭಟನಾಕಾರರ ಕೈಗೆ ಕೊಟ್ಟರು, ಈ ಕುರಿತು ಚರ್ಚಿಸಲು ಗುರುವಾರ ಹುನಗುಂದ ಘಟಕಕ್ಕೆ ಬರುವ ಭರವಸೆಯನ್ನು ಡಿಸಿ ನೀಡಿದ ನಂತರ ಪ್ರತಿಭಟನೆ ಕೈ ಬಿಡಲಾಯಿತು.

ಅಶೋಕ ಪೂಜಾರಿ, ಹುಸೇನ ಸಂದಿಮನಿ, ಜಹಿರ ಸಂಗಮಕರ, ಮಹಿಬೂಬ ಅಳೊಳ್ಳಿ, ರವಿ ಕೊಪ್ಪದ, ಬಸವರಾಜ ತಿಮ್ಮಾಪೂರ, ನವೀನ ಸಂದಿಮನಿ, ಪ್ರವೀನ ವಾಲಿಕಾರ, ಮುತ್ತು ದಾಸರ, ಎಸ.ಎಸ್. ಹಿರೇಮಠ, ಸಯ್ಯದ ಬೇಪಾರಿ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಶೆಡ್ ಮುಂದೆ ಸಂತ್ರಸ್ತರ ಅನಿರ್ದಿಷ್ಟಾವಧಿ ಧರಣಿ

ಹಿನ್ನೀರು, ನದಿಯ ಪ್ರವಾಹ ಸಂತ್ರಸ್ತರಿಗೆ ಹೊಸ ಶೆಡ್ ನಿರ್ಮಾಣ,: ನಿವೇಶನಗಳ ಮರುಹಂಚಿಕೆಗೆ ಆಗ್ರಹ

• **ಕನ್ನಡಪ್ರಭ ವಾರ್ತೆ** ಹುನಗುಂದ

ತಾಲೂಕಿನ ಇದ್ದಲಗಿ ಗ್ರಾಮದ ತಾತ್ಕಾಲಿಕ ಶೆಡ್‌ಗಳಲ್ಲಿ ವಾಸಿಸುತ್ತಿರುವ ಸಂತ್ರಸ್ತರ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಶೆಡ್ ಮುಂದೆ ಸಂತ್ರಸ್ತರು ಬುಧವಾರ ಅನಿರ್ದಿಷ್ಟಾವಧಿವರೆಗೆ ಧರಣಿ ಆರಂಭಿಸಿದರು.

ಗ್ರಾಮದ ಸಂತ್ರಸ್ತ ಹಸನಸಾಬ್ ಪಿಂಜಾರ ಮಾತನಾಡಿ, ನಾರಾಯಣಪುರ ಜಲಾಶಯದ ಹಿನ್ನೀರು ಮತ್ತು ಮಲಪ್ರಭಾ ನದಿಯ ಪ್ರವಾಹದಿಂದ ಬಾಧಿತ ಪ್ರದೇಶಗಳಲ್ಲಿ 19 ವರ್ಷದಿಂದ ಸಂತ್ರಸ್ತರು ವಾಸಿಸುವ ಶೆಡ್‌ಗಳಲ್ಲಿ ಮಳೆ ಹಾಗೂ ಬಿಸಿಲು ತಾಪದಿಂದ ಶಿಥಲಾವಸ್ಥೆಗೆ ತಲುಪಿದ್ದು, ಇದರಲ್ಲಿಯೇ ಇಲ್ಲಿನ ಜನರು ನಿತ್ಯ ಜೀವನ ಸಾಗಿಸುತ್ತಿದ್ದಾರೆ. ಇದ್ದಲಗಿ ಗ್ರಾಮದಲ್ಲಿ 19 ವರ್ಷದ ಹಿಂದೆ ತಾತ್ಕಾಲಿಕವಾಗಿ ನಿರ್ಮಿಸಿದ 200ಕ್ಕೂ ಅಧಿಕ ಶೆಡ್ ಗಳಲ್ಲಿ ಸಂತ್ರಸ್ತರು ವಾಸಿಸುತ್ತಿದ್ದು. ತಗಡಿನ ಶೆಡ್‌ಗಳು ತುಕ್ಕು ಹಿಡಿದು ಬಲೀಸ್‌ಗಳು ನೆಲದಲ್ಲಿ ಕೊಳೆತಿದ್ದು, ಯಾವುದೇ ಸಮಯದಲ್ಲಿಯಾದರೂ ಶೆಡ್ ಬೀಳುವ ಸ್ಥಿತಿಯಲ್ಲಿದೆ. ದುರ್ಘಟನೆ ನಡೆಯುವ ಮುಂಚೆಯೇ ಕೂಡಲೇ ಹೊಸ ಶೆಡ್ ಗಳನ್ನು ಪುನರ್‌ನಿರ್ಮಾಣ ಮಾಡಬೇಕು. ಪುನರ್ವಸತಿ ಕೇಂದ್ರಗಳಲ್ಲಿ ಮೂಲಸೌಕರ್ಯ ಕಲ್ಪಿಸುವರೆಗೂ ಮತ್ತು ಮನೆ ಕಟ್ಟಿಸಿಕೊಡುವವರೆಗೂ ನಮಗೆ ತಾತ್ಕಾಲಿಕ ಶೆಡ್‌ಗಳಲ್ಲಿ ಇರುವಂತೆ ಸರ್ಕಾರ ನೋಡಿಕೊಳ್ಳಬೇಕು. ಸರ್ಕಾರ ನೀಡಿದ ಪುನರ್ವಸತಿ ಕೇಂದ್ರಗಳಲ್ಲಿ ನಿಯಮಾವಳಿಗಳಲ್ಲಿ ಅವಶ್ಯಕ ತಿದ್ದುಪಡಿ ಮಾಡಿ ಸಂತ್ರಸ್ತರಿಗೆ ಪುನರ್ವಸತಿಕೇಂದ್ರಗಳಲ್ಲಿಮನೆನಿರ್ಮಿಸಿಕೊಳ್ಳಲು ಒಂದು ಗುಂಟೆ ವಿಸ್ತೀರ್ಣ ಬದಲಿಗೆ ನಾಲ್ಕು ಗುಂಟೆಯಂತೆ ನಿವೇಶನಗಳ ಮರುಹಂಚಿಕೆ ಮಾಡಿಹಕ್ಕುಪತ್ರ ವಿತರಿಸುವಕ್ರಮಕೈಗೊಳ್ಳಬೇಕು. ನಮ್ಮ ಎಲ್ಲ ಬೇಡಿಕೆಗಳನ್ನು ಶಾಶ್ವತವಾಗಿ ಈಡೇರಿಸುವರೆಗೂ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದೆಂದು ತಿಳಿಸಿದರು.

ಸಂತ್ರಸ್ತರಾದ ಭೀಮಣ್ಣ ಅಡಿವಿಹಾಳ, ಯಲ್ಲಪ್ಪ ಆನೆಹೊಸೂರ, ಬಸವರಾಜ ಮುಳ್ಳೂರ, ಶರಣಪ್ಪ ಮುಳ್ಳೂರ, ಮಲ್ಲಮ್ಮ ಘಟ್ಟಿಮಠ, ಮುತ್ತವ್ವ ಬೇನಾಳ, ಶ್ಯಾವವ್ವ ಕೆಸರಭಾವಿ, ಬಸವ್ವ ಸುಂಕದ, ಅಮೀನಸಾಬ ನಿಡಗುಂದಿ, ಸಂಗಪ್ಪ ಚಿಕ್ಕೋಡಿ ಸೇರಿದಂತೆ ಗ್ರಾಮಸ್ಥರು ಇದ್ದರು.



ಹುನಗುಂದ ತಾಲೂಕಿನ ಇದ್ದಲಗಿ ಗ್ರಾಮದ ತಾತ್ಕಾಲಿಕ ಶೆಡ್‌ಗಳಲ್ಲಿ ವಾಸಿಸುತ್ತಿರುವ ಸಂತ್ರಸ್ತರ ವಿವಿಧ ಸಮಸ್ಯೆಗಳಿಗೆ ಪರಿಹಾರಕ್ಕೆ ಒತ್ತಾಯಿಸಿ ಸಂತ್ರಸ್ತರು ಶೆಡ್ ಮುಂದೆ ಅನಿರ್ದಿಷ್ಟ ಧರಣಿಯ ನಡೆಸಿದರು. ಭೀಮಣ್ಣ ಅಡಿವಿಹಾಳ, ಯಲ್ಲಪ್ಪ ಆನೆಹೊಸೂರ, ಬಸವರಾಜ ಮುಳ್ಳೂರ, ಶರಣಪ್ಪ ಮುಳ್ಳೂರ ಇದ್ದರು.

- ನಾರಾಯಣಪುರ ಜಲಾಶಯದ ಹಿನ್ನೀರು ಮತ್ತು ಮಲಪ್ರಭಾ ನದಿಯ ಪ್ರವಾಹದಿಂದ ಬಾಧಿತ ಪ್ರದೇಶಗಳಲ್ಲಿ 19 ವರ್ಷದಿಂದ ಸಂತ್ರಸ್ತರು ವಾಸಿಸುವ ಶೆಡ್‌ಗಳಲ್ಲಿ ಮಳೆ ಹಾಗೂ ಬಿಸಿಲು ತಾಪದಿಂದ ಶಿಥಲಾವಸ್ಥೆಗೆ ತಲುಪಿದ್ದು, ಶೆಡ್ ಬೀಳುವ ಸ್ಥಿತಿಯಲ್ಲಿವೆ. ಕೂಡಲೇ ಹೊಸ ಶೆಡ್ ಗಳನ್ನು ಪುನರ್ ನಿರ್ಮಾಣ ಮಾಡಬೇಕು.

ಅಗ್ನಿಶಾಮಕ ದಳಕ್ಕೆ ಅಗತ್ಯ ಅನುದಾನ ನೀಡುವೆ

ಹೊಸ ಕಟ್ಟಡ ನಿರ್ಮಾಣಕ್ಕೆ ಗೃಹ ಸಚಿವರಿಗೆ ಮನವಿ ಮಾಡಿರುವೆ: ಶಾಸಕ ಸಿದ್ದು ಸವದಿ

• **ಕನ್ನಡಪ್ರಭ ವಾರ್ತೆ** ರಬಕವಿ-ಬನಹಟ್ಟಿ



ತೇರದಾಳ ಮತಕ್ಷೇತ್ರದ ರಬಕವಿ-ಬನಹಟ್ಟಿ ಹಾಗೂ ತೇರದಾಳದ ಅಗ್ನಿ ಶಾಮಕದಳಕ್ಕೆ ಸ್ಥಳೀಯ ನಗರಸಭೆ ಹಾಗೂ ಶಾಸಕರ ನಿಧಿಯಲ್ಲಿ ಹೆಚ್ಚಿನ ಅನುದಾನ ನೀಡಿ ಅದಕ್ಕೆ ಅವಶ್ಯವಿರುವ ಎಲ್ಲ ಸೌಲಭ್ಯ ಮಾಡಿಕೊಡಲಾಗುವುದು ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಬುಧವಾರ ರಾಮಪುರದ ನಗರಸಭೆ ಹತ್ತಿರವಿರುವ ಅಗ್ನಿಶಾಮಕ ಘಟಕದಲ್ಲಿ ಹೊಸ್ ಅಗ್ನಿಶಾಮಕ ದಳದ ₹75 ಲಕ್ಷ ವೆಚ್ಚದ ಜಲವಾಹನ ಹಾಗೂ ಇತರೆ ಪರಿಕರಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಬೆಂಕಿ ಅನಾಹುತ ತಡೆಯಲು ಈ ವಾಹನಗಳು ಅನುಕೂಲ ವಾಗಲಿವೆ. ತೇರದಾಳಕ್ಕೆ ಹೊಸ ಅಗ್ನಿಶಾಮಕದಳದ ಕಟ್ಟಡ ನಿರ್ಮಾಣವಾಗಿದ್ದು, ಇಲ್ಲೂ ಹೊಸ ಕಟ್ಟಡ ನಿರ್ಮಾಣಕ್ಕೆ ಗೃಹ ಸಚಿವರಿಗೆ ಕೇಳಿದ್ದೇವೆ. ಸಚಿವರು ಭರವಸೆ ನೀಡಿದ್ದಾರೆ. ಸದ್ಯ ನಗರಸಭೆಯಜಾಗದಲ್ಲಿಕಾರ್ಯನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದೆಂದರು.

ನಗರಸಭೆ ಮಾಜಿ ಅಧ್ಯಕ್ಷ ಸಂಜಯ ತೆಗ್ಗಿ, ವಿದ್ಯಾ ದಬಾಡಿ, ಅಗ್ನಿ ಶಾಮಕದಳದ ಮುಖ್ಯ ಅಧಿಕಾರಿ ರಮೇಶ ಜಿ.ಚಿವಟೆ, ಸವಿತಾ ಹೊಸೂರ, ಪಾಂಡು ಯರಕನ್ನವರ, ಸುವರ್ಣ ಕೊಪ್ಪದ, ಅಗ್ನಿ ಶಾಮಕದಳ ಎಚ್.ಎಸ್.ಗೋಕಾಕ, ಎಂ.ಎಸ್.ಹೂಗಾರ, ಪಿ.ಎಲ್.ಹವಾಲ್ದಾರ, ಆರ್.ಎಸ್. ಸನದಿ, ಎಂ.ಜಿ.ಉದಪುಡಿ, ಎಸ್.ವೈ. ಸಂದ್ರಿಮನಿ, ಕೆ.ಡಿ. ಹಳ್ಳೂರ, ಪಿ.ಆರ್.ರಾಠೋಡ, ಎಲ್.ವಿ. ಹಳ್ಳಿ, ಎಸ್.ಎನ್.ಅನವಾಲ, ಎಂ.ಡಿ.ರಾಠೋಡ, ಕೆ.ಜಿ. ಬಿಸಲನಾಯಿಕ, ಜಿ.ವಿ. ಕಾಂಬಳೆ, ಎಸ್.ವಿ.ಮೇಲಾಪೂರ, ಬಿ.ಕೆ.ಚೌಗುಲಾ, ಕೆ.ಎಫ್. ಕೌತಾಳ, ಎಸ್.ಎಸ್.ಪೂಜೇರಿ, ಎಂ.ಎಚ್.ತಳವಾರ, ಶ್ರೀಧರ ಬಡಿಗೇರ, ಎಂ.ಎಸ್.ಸತಿಗೌಡರ, ಬಿ. ಎನ್. ಕಟಗಿ, ಎಸ್. ಎಮ್. ಚೌಧರಿ, ಎಸ್. ಎಮ್. ಸಿನಪ್ಪಗೋಳ ಸೇರಿದಂತೆ ಅನೇಕರಿದ್ದರು.

ಜಿಲ್ಲಾ ಬಾಲ ಭವನದಲ್ಲಿ ಬೇಸಿಗೆ ಶಿಬಿರ

ಬಾಗಲಕೋಟೆ: ಪ್ರಸಕ್ತ ಸಾಲಿಗೆ ಜಿಲ್ಲಾ ಬಾಲಭವನದಿಂದ 6 ರಿಂದ 16 ವರ್ಷದ ಮಕ್ಕಳಿಗೆ, ಮೇ 11 ರಿಂದ 25ವರೆಗೆ 15 ದಿನಗಳ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಚಿತ್ರಕಲೆ, ಕರಕುಶಲ, ಜೇಡಿ ಮಣ್ಣಿನ ಕಲೆ, ಸಮೂಹ ಸಂಗೀತ, ಸಮೂಹ ನೃತ್ಯ ಮತ್ತು ಯೋಗ, ಕರಾಟೆ, ವಿವಿಧ ಚಟುವಟಿಕೆ ಹಮ್ಮಿಕೊಳ್ಳಲಾಗುತ್ತಿದೆ. ಆಸಕ್ತ ಮಕ್ಕಳು ಮೇ 11ರೊಳಗಾಗಿ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಇಲಾಖೆ, ಬಾಗಲಕೋಟೆ ಇವರಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ.08354- 235463ಗೆ ಸಂಪರ್ಕಿಸಬಹುದಾಗಿದೆ.

ತೋವಿವಿಯಲ್ಲಿ ಚಿಣ್ಣರ ಬೇಸಿಗೆ ಶಿಬಿರ

ಬಾಗಲಕೋಟೆ: ತೋಟಗಾರಿಕೆ ವಿಸ್ತರಣಾ ಶಿಕ್ಷಣಸಂಸ್ಥೆ,ವಿಸ್ತರಣಾನಿರ್ದೇಶನಾಲಯ, ತೋವಿವಿ, ಬಾಗಲಕೋಟೆಯಲ್ಲಿ ಐದು ದಿನದ ಚಿಣ್ಣರ ತೋಟ-ಪಾಠ ಬೇಸಿಗೆ ಶಿಬಿರವನ್ನು ಮೇ 18 ರಿಂದ 22ವರೆಗೆ ಹಮ್ಮಿಕೊಳ್ಳಲಾಗಿದ್ದು, 7 ರಿಂದ 14 ವರ್ಷದ ಮಕ್ಕಳ ಪಾಲಕರು, ಪೋಷಕರು ಡಾ.ದೀಪಾ ತೇರದಾಳ (7899285785), ಹೇಮಾ ಹಾದಿಮನಿ (9019708340) ಇವರನ್ನು ಸಂಪರ್ಕಿಸಿ ತಮ್ಮ ಮಗುವಿನ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ನೋಂದಣಿ ಶುಲ್ಕ 500 ರೂಪಾಯಿ ಇದ್ದು, ಶಿಬಿರ ಬೆಳಗ್ಗೆ 10 ರಿಂದ ಮಧ್ಯಾಹ್ನ 1.30 ವರೆಗೆ ನಡೆಯಲಿದೆ ಎಂದು ತೋಟಗಾರಿಕೆ ವಿವಿಯ ವಿಸ್ತರಣಾ ನಿರ್ದೇಶಕರು ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಮಿಡ್‌ವೈವ್ಸ್ ಡೇ | ಅಂತಾರಾಷ್ಟ್ರೀಯ ಮಿಡವೈವ್ಸ್‌ಡೇ ಕಾರ್ಯಕ್ರಮದಲ್ಲಿ ಪ್ರಾ.ಡಾ.ದೀಲಿಪ್ ನಾಟೇಕಾರ

ಶುಶ್ರೂಷಾ ಕಾರ್ಯಪಡೆ ಗಮನಾರ್ಹ ವಿಸ್ತರಣೆ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ



ಹೆಚ್ಚುತ್ತಿರುವ ತಾಯಂದಿರ ಆರೋಗ್ಯ ಬೇಡಿಕೆ ಪೂರೈಸಲು ಮತ್ತು ಮರಣ ಪ್ರಮಾಣ ಕಡಿಮೆ ಮಾಡಲು ಭಾರತದ ಶುಶ್ರೂಷಕಿಯರು ಮತ್ತು ಶುಶ್ರೂಷಾ ಕಾರ್ಯಪಡೆ ಗಮನಾರ್ಹ ವಿಸ್ತರಣೆಗೆ ಒಳಗಾಗುತ್ತಿದೆ. ದೇಶ ಸುಮಾರು 39.4 ಲಕ್ಷ (3.94 ಮಿಲಿಯನ್) ಶುಶ್ರೂಷಾ ಸಿಬ್ಬಂದಿ ಹೊಂದಿದ್ದು, 1000 ಜನರಿಗೆ ಅಂದಾಜು 1.728 ದಾದಿಯರು ಮತ್ತು ಶುಶ್ರೂಷಕಿಯರು ಇದ್ದಾರೆ ಎಂದು ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನಗಳ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ದೀಲಿಪ್ ನಾಟೇಕಾರ ಹೇಳಿದರು.ಬವಿವ ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ಶುಶ್ರೂಷಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಮಿಡ್‌ವೈವ್ಸ್ ಡೇ ನಿಮಿತ್ತ ಒನ್ ಮಿಲಿಯನ್ -ಮೋರ್‌ಮಿಡವೈವ್ಸ್ ಎಂಬ ಶೀರ್ಷಿಕೆಯೊಂದಿಗೆ ಹಾನಗಲ್ ಶ್ರೀ ಕುಮಾರೇಶ್ವರ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ, ಬಾಗಲಕೋಟೆಯ ಓಬಿಜಿ ಒಳರೋಗಿಗಳ ವಿಭಾಗದಲ್ಲಿಹಮ್ಮಿಕೊಂಡಕಾರ್ಯಕ್ರಮದಲ್ಲಿ ಮಾತನಾಡಿದರು.

ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಓಬಿಜಿ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥ ಡಾ.ಜಯಶ್ರೀ ಅವರಸಂಗ್ ಮಾತನಾಡಿ, ಜಾಗತಿಕವಾಗಿ ಸೂಲಗಿತ್ತಿಯರ ತೀವ್ರ ಕೊರತೆಯಿದ್ದು,ಹೆರಿಗೆಯಸಮಯದಲ್ಲಿ ಮಹಿಳೆಯರು ಮತ್ತು ನವಜಾತ ಶಿಶುಗಳ ಸಾವು ತಡೆಗಟ್ಟುವಲ್ಲಿ ಸೂಲಗಿತ್ತಿಯರ ಪಾತ್ರ ಪ್ರಮುಖವಾಗಿದೆ ಎಂದರು.

ಹಾನಗಲ್ ಶ್ರೀ ಕುಮಾರೇಶ್ವರ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಬಾಗಲಕೋಟೆಯ ನರ್ಸಿಂಗ್ ಅಧೀಕ್ಷಕಿ ಸುನಂದಾ ಮತ್ತು ನರ್ಸಿಂಗ್ ಅಧಿಕಾರಿ ಗಿರಿಜಾ ನರ್ಸಿಂಗ್ ಮೇಲ್ವಿಚಾರಕಿ ಸ್ವಪ್ನಾ, ಲತಾ ಮತ್ತು ಇತರ ಶುಶ್ರೂಷಕಿಯರು ಮಾತನಾಡಿದರು.

ಸಜ್ಜಲಶ್ರೀನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ಶುಶ್ರೂಷಾ ವಿಭಾಗದ ಪ್ರಾಧ್ಯಾಪಕಿ ಡಾ.ಕಮಲಾ ಕೆ.ಎನ್ ಒಂದು ಮಿಲಿಯನ್ ಗೂ ಹೆಚ್ಚು ಸೂಲಗಿತ್ತಿಯರು ಎಂಬ ವಿಷಯದ ಕುರಿತು ಮಾತನಾಡಿದರು. ಈ ಕುರಿತಂತೆ ನರ್ಸಿಂಗ್ ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ನೇಮಿಸಿಕೊಳ್ಳಬೇಕೆಂದು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು.

ಎಂ.ಎಸ್ಸಿ ನರ್ಸಿಂಗ್ ಪ್ರಥಮ ವರ್ಷದ ವಿದ್ಯಾರ್ಥಿನಿಯಾದ ಗೌರಿ ಸ್ವಾಗತಿಸಿದರು. ಅಖಿಲಾ ನಿರೂಪಿಸಿದರು. ಶಿವಲೀಲಾ ವಂದಿಸಿದರು. ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಪ್ರಮಾಣಪತ್ರ ವಿತರಿಸಲಾಯಿತು ಉಪನ್ಯಾಸಕಿಯರಾದ ಪ್ರಿಯಾಂಕಾ ಜೆ, ಪೂಜಾ ಎಂ. ಹಾಗೂ ರೇಣುಕಾ ಕೆ. ಹಾಗೂ ಪೂಜಾ ಪಿ., ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಎಂ.ಎಸ್ಸಿ. ಪ್ರಥಮ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಸಹ ಭಾಗವಹಿಸಿದ್ದರು.

ನಾಳೆ, ನಾಡಿದ್ದು ಮಕ್ಕಳ ನಾಟಕ ಪ್ರದರ್ಶನ

ಇಳಕಲ್ಲ: ಇಳಕಲ್‌ನ ನಾಟ್ಯ ರಾಣಿ ಕಲಾಸಂಘ ಮತ್ತು ಚಿಣ್ಣರ ಚಿಲಿಪಿಲಿ 2026ರ 20ನೇ ವಾರ್ಷಿಕೋತ್ಸವ ಉದ್ಘಾಟನೆ ನಿಮಿತ್ತ ಒಂದು ತಿಂಗಳ ಕಾಲ ರಂಗ ತರಬೇತಿ ಪಡೆದ 50ಕ್ಕೂ ಅಧಿಕ ಮಕ್ಕಳಿಂದ ವಿವಿಧ ನಾಟಕ ಮತ್ತು ನೃತ್ಯ ಪ್ರದರ್ಶನ ಹಾಗೂ ಸನ್ಮಾನ ಕಾರ್ಯಕ್ರಮವನ್ನು ಮೇ 9 ಹಾಗೂ 10ರಂದು ಇಳಕಲ್ಲ ನಗರದ ಸುವರ್ಣ ರಂಗ ಮಂದಿರದಲ್ಲಿ ಸಂಜೆ 4.30 ಗಂಟೆಗೆ ಆಯೋಜಿಸಲಾಗಿದೆ ಎಂದು ನಾಟ್ಯರಾಣಿ ಕಲಾ ಸಂಘದ ಅಧ್ಯಕ್ಷೆ ಉಮಾರಾಣಿ ಬಾರಿಗಿಡದ ತಿಳಿಸಿದರು.

ನಗರದ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 9ರಂದು ಮಕ್ಕಳಿಂದ ನೃತ್ಯ, ರಂಗಗೀತೆ, ಜಾನಪದ ಗೀತೆ, ಜೋಗತಿ ನೃತ್ಯ, ಭಾವಗೀತೆ ಹಾಗೂ ನಾಟಕಗಳ ಉಚಿತ ಪ್ರದರ್ಶನ ಏರ್ಪಡಿಸಲಾಗಿದೆ. ಸಮಾರಂಭವನ್ನು ಶಾಸಕ ವಿಜಯಾನಂದ ಕಾಶಪ್ಪನವರ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂತೋಷ ಭೋವಿ, ವಿಜಯಮಹಾಂತೇಶ ಗದ್ದನಕೇರಿ, ಪ್ರೊ.ಕೆ.ಎ. ಬನ್ನಟ್ಟಿ, ಜಬ್ಬಾರ್ ಕಲಬುರ್ಗಿ ಜ್ಯೋತಿ ಗುಳೇದಗುಡ್ಡ, ಸಂಗಣ್ಣ ಗದ್ದಿ ಆಗಮಿಸುವರು. 10ರಂದು ನಡೆಯುವ ಸಮಾರಂಭ ಹಾಗೂ ನಾಟಕ ಪ್ರದರ್ಶನ ಉದ್ಘಾಟನೆಯ ಸಾನ್ನಿಧ್ಯವನ್ನು ಡಾ.ಗುರುಮಹಾಂತ ಶ್ರೀಗಳು ವಹಿಸಲಿದ್ದು, ಅವರೊಂದಿಗೆ ಅಬ್ಬಿಗೇರಿಯ ಬಸವರಾಜ ಶರಣರು ಆಗಮಿಸುವರು. ಉಮಾರಾಣಿ ಬಾರಿಗೀಡದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪುಣೆಯ ರವೀಂದ್ರ ದೇವಗಿರಕರ, ಬಸವರಾಜ ಮಠದ, ವಿಶ್ವನಾಥ ವಂಶಾಕೃತಮಠ, ಮಹಾದೇವ ಕಂಬಾಗಿ ಬಲವಂತ ಪಾಟೀಲ ಆಗಮಿಸುವರು. ನಂತರ ಉಮಾರಾಣಿ ಹಾಗೂ ಮಹಾಂತೇಶ ಗಜೇಂದ್ರಗಡ ನಿರ್ದೇಶನದ ನಾಟಕಗಳ ಪ್ರದರ್ಶನ ನಡೆಯಲಿದೆ. ಈ ಎರಡು ದಿನಗಳ ಪ್ರದರ್ಶನ ಉಚಿತವಿದ್ದು ಕಲಾಸಕ್ತರು ಆಗಮಿಸಬೇಕು ಎಂದು ಸಂಘಟಕರು ವಿನಂತಿಸಿದ್ದಾರೆ.



ಪ್ರಭಾವಿ ಮುಸ್ಲಿಂ ನಾಯಕರ ಕಡೆಗಣಿಸುವುದನ್ನು ನಿಲ್ಲಿಸಬೇಕು, ಅಬ್ದುಲ್ ಜಬ್ಬಾರ್, ನಜೀರ್‌ಅಹ್ಮದ ವಿರುದ್ಧದ ಕ್ರಮ ಮರುಪರಿಶೀಲಿಸಿ ಕೈಬಿಡಬೇಕು. ಸಮುದಾಯದ ಪ್ರಭಾವಿ ನಾಯಕ ಜಮೀರ್‌ಅಹ್ಮದ್ ಖಾನ್‌ರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು.

• **ಮಕ್ಬುಲ್‌ಸಾಬ ಲೇಂಗ್ರೆ,** ಕಾಂಗ್ರೆಸ್ ಜಿಲ್ಲಾ ಮುಖಂಡರು

ಸುದ್ದಿ ಸಿಂಚನ

ಸಾಮೂಹಿಕ ಉಪನಯನ, ಧಾರ್ಮಿಕ ಸಭೆ ಇಂದು

ಬಾಗಲಕೋಟೆ: ಸಮೀಪದ ಮುರನಾಳ ಪುನರ್ವಸತಿ ಕೇಂದ್ರದಲ್ಲಿ ಶ್ರೀ ಮಳೆರಾಜೇಂದ್ರಸ್ವಾಮಿ ಮಠದ ಗುರುನಾಥ ಸ್ವಾಮೀಜಿ ಸಂಕಲ್ಪದಂತೆ ಶುಕ್ರವಾರ ಸಾಮೂಹಿಕ ಉಪನಯನ ಹಾಗೂ ಧಾರ್ಮಿಕ ಸಭೆ ಜರುಗಲಿದೆ. ಬೆಳಗಿನ ಜಾವ ಶ್ರೀಮಠದಲ್ಲಿ ಗುರನಾಥಸ್ವಾಮಿಗಳ ಸುಪತ್ರರಾದ ವೀರಬ್ರಹ್ಮೇಂದ್ರಸ್ವಾಮಿಗಳ ಉಪನಯನ ಹಾಗೂ ಸಾಮೂಹಿಕ ಉಪನಯನಗಳು ಶಾಸ್ತ್ರೋಕ್ತವಾಗಿ ಜರುಗಲಿವೆ, ನಂತರ ನಡೆಯವ ಧಾರ್ಮಿಕ ಸಭೆಯ ಸಾನ್ನಿಧ್ಯವನ್ನು ಶ್ರೀಮಠದ ಹಿರಿಯ ಶ್ರೀಗಳಾದ ಮಳಿಯಪ್ಪಯ್ಯಸ್ವಾಮೀಜಿ ವಹಿಸುವರು, ವಿಶೇಷವಾಗಿ ಕಂದಿಮಲ್ಲೆಯ ಪಲ್ಲೆ ಬ್ರಂಗಂಗಾರಿ ಮಠದ ಜಗದ್ಗುರು ಮದ್ವಿರಾಠ ಪೋತಲ್ಲೂರು ವೀರಬ್ರಹ್ಮೇಂದ್ರಸ್ವಾಮಿಗಳ 8ನೇ ವಂಶಸ್ಥರಾದ ವೀರಭದ್ರಸ್ವಾಮಿಗಳು ಆಗಮಿಸಿವರು. ಸಿಂದಗಿ ಮೂರುಝಾವಮಠದ ರಾಮಚಂದ್ರಸ್ವಾಮಿಗಳು, ಶಿರೋಳ-ಬೈರನಹಟ್ಟಿ ವೀರಕ್ತಮಠದ ಶಾಂತಲಿಂಗ ಸ್ವಾಮಿಗಳು, ಶಾಡಲಗೇರಿಯ ವಿಶ್ವಕರ್ಮ ಏಕದಂಡಗಿ ಮಠದ ಸೂರ್ಯನಾರಾಯಣ ಸ್ವಾಮಿಗಳು ಸೇರಿದಂತೆ ಮುರನಾಳ ಮಠದ ಸರ್ವ ಪೂಜ್ಯರು ಸಾನ್ನಿಧ್ಯವನ್ನು ವಹಿಸುವರು. ನಂತರದಲ್ಲಿ ಅನ್ನ ಪ್ರಸಾದ ಜರುಗುವು ಶ್ರೀಮಠದ ಎಲ್ಲ ಸದ್ಭಕ್ತರು ಆಗಮಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕೆಂದು ಶ್ರೀಮಠದ ಪೂಜ್ಯರಾದ ಶಿವಾನಂದ ಸ್ವಾಮಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಮಿಕಲ್ ಬಳಸಿದ ಹಣ್ಣು ಮಾರಿದ್ರೆ ಕಠಿಣ ಕ್ರಮ

ಗುಳೇದಗುಡ್ಡ: ಪಟ್ಟಣದಲ್ಲಿ ಹಣ್ಣು ಹಂಪಲು ಮಾರಾಟ ಮಾಡುವ ಕೆಲ ವ್ಯಾಪಾರಿಗಳು ಕೆಮಿಕಲ್ ಬಳಸಿ ಅವುಗಳನ್ನು ಕೃತಕವಾಗಿ ಹಣ್ಣಾಗಿಸಿ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಪುರಸಭೆ ಮುಖ್ಯಾಧಿಕಾರಿ ಎ.ಎಚ್. ಮುಜಾವರ ತಿಳಿಸಿದ್ದಾರೆ.

■ ಸಾರ್ವಜನಿಕರ ಜೀವದ ಜೊತೆಗೆ ಚೆಲ್ಲಾಟ ಆಡುವುದು ಅತೀ ಗಂಭೀರ ಅಪರಾಧ

ಪಟ್ಟಣದಲ್ಲಿ ಹಣ್ಣುಗಳ ಮರಾಟಗಾರರು ಅವುಗಳನ್ನು ನೈಸರ್ಗಿಕವಾಗಿ ಹಣ್ಣಾಗುವಂತೆ ಪರಿವರ್ತಿಸಿ ಮಾರಾಟ ಮಾಡದೇ, ಲಾಭದ ಉದ್ದೇಶದಿಂದ ಕೆಲ ವ್ಯಾಪಾರಿಗಳು ಅವುಗಳಿಗೆ ಕೆಮಿಕಲ್ ಬಳಸಿ ಬೇಗನೆ ಹಣ್ಣಾಗುವಂತೆ ಮಾಡಿ ಮಾರಾಟ ಮಾಡುವುದು ಪುರಸಭೆ ಗಮನಕ್ಕೆ ಬಂದಿದೆ. ಇದರಿಂದ ಜನರ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತದೆ. ಸಾರ್ವಜನಿಕರ ಜೀವದ ಜೊತೆಗೆ ಚೆಲ್ಲಾಟವಾಡುವುದು ಅತೀ ಗಂಭೀರ ಅಪರಾಧವಾಗಿದೆ. ಇನ್ಮುಂದೆ ಇಂತಹ ಹಣ್ಣುಗಳನ್ನು ಮಾರಾಟ ಮಾಡದೇ ನೈಸರ್ಗಿಕವಾಗಿ ಹಣ್ಣಾಗಿಸಿ ಮಾರಾಟ ಮಾಡಬೇಕು. ಇಲ್ಲದಿದ್ದರೆ ಕಠಿಣ ಕ್ರಮ ಜರುಗಿಸಲಾಗುತ್ತದೆಂದು ಮುಖ್ಯಾಧಿಕಾರಿ ಎಚ್ಚರಿಸಿದ್ದಾರೆ.

ನೀರಿಗಾಗಿ ಪುರಸಭೆಗೆ ಮುತ್ತಿಗೆ

ಖಾಲಿ ಕೊಡಗಳೊಂದಿಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಮಹಿಳೆಯರು

• **ಕನ್ನಡಪ್ರಭ ವಾರ್ತೆ** ತೇರದಾಳ(ರ-ಬ)



ತೇರದಾಳ ಪಟ್ಟಣದ ಕಲ್ಲಟ್ಟಿ ಗಲ್ಲಿಯ ಜನನಿಬಿಡ ಪ್ರದೇಶವಾದ ಕಾಮನಕಟ್ಟೆ ಹಿಂಭಾಗದ ವಸತಿ ಜನತೆ ಹಿಂದಿನ ಜನಪ್ರತಿನಿಧಿಗಳನ್ನು ನೀರು ಪೂರೈಸಲು ಹಲವಾರು ಬಾರಿ ಮನವಿ ಮಾಡಿದ್ದರೂ ತಮ್ಮ ಪ್ರದೇಶಕ್ಕೆ ನೀರು ಪೂರೈಕೆಯಾಗುತ್ತಿಲ್ಲ ಎಂದು ಆಕ್ರೋಶಗೊಂಡ ಮಹಿಳೆಯರು ಖಾಲಿ ಕೊಡಗಳನ್ನು ಹಿಡಿದು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಪುರಸಭೆಗೆ ಮುತ್ತಿಗೆ ಹಾಕಿದರು.

ಕೃಷ್ಣಾ ನದಿಯಲ್ಲಿ ಬೇಸಿಗೆ ಬವಣೆ ತಪ್ಪಿಸುವಷ್ಟು ಪ್ರಮಾಣದಲ್ಲಿ ನೀರು ಇದೆಯೆಂದು ಮಾಧ್ಯಮಗಳಲ್ಲಿ ಶಾಸಕ ಸಿದ್ದು ಸವದಿ ಹೇಳಿಕೆನೀಡಿದ್ದರೂ ನಮ್ಮ ಪ್ರದೇಶದಲ್ಲಿ ಪುರಸಭೆ ನೀರು ಪೂರೈಕೆ ಮಾಡುತ್ತಿಲ್ಲವೆಂದು ಮಹಿಳೆಯರು ಆಕ್ರೋಶ ವ್ಯಕ್ತಪಡಿಸಿದರು. ಈ ಹಿಂದೆ ಮುಖ್ಯಾಧಿಕಾರಿಯಾಗಿದ್ದ ಅರುಣಕುಮಾರ ನೀರು ಶುದ್ಧೀಕರಣ ಘಟಕದ ಬಳಿಯ ನದಿ ಪ್ರದೇಶದಲ್ಲಿ ಡಗ್ಗಿಂಗ್ ನಡೆಸಿದ್ದರ ಕಾರಣ ಕೃಷ್ಣೆಯ ಒಡಲು ಸಂಪೂರ್ಣ ಖಾಲಿಯಾಗಿ ರಬಕವಿ-ಬನಹಟ್ಟಿ ಅವಳಿ ನಗರಗಳಿಗೆ ನೀರು ಪೂರೈಕೆಗೆ ವ್ಯತ್ಯಯವಾದರೂ ಪಟ್ಟಣಕ್ಕೆ 15 ದಿನಕ್ಕೂ ಹೆಚ್ಚು ಕಾಲ ಅಬಾಧಿತವಾಗಿ ನೀರು ಪೂರೈಕೆಯಾಗುತ್ತಿತ್ತು. ಸಮಸ್ಯೆ ಕಡೆಗೆ ಗಮನ ಹಿರಿಸದ ಅಧಿಕಾರಿಗಳಿಂದ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದೆ. ವಾರ್ಡನಲ್ಲಿ ನಾಲ್ಕು ಕೊಳವೆಬಾವಿಗಳಿದ್ದು, ಮೂರು ಬಂದ್ ಆಗಿವೆ. ಒಂದರಲ್ಲಿ ಕೆಲವೇ ಸಮಯ ಮಾತ್ರ ನೀರು ಬರುತ್ತಿದ್ದು, ಜನತೆ 15 ದಿನಗಳಿಂದ ನೀರಿಗಾಗಿ ಪರಿತಪಿಸುವಂತಾಗಿದೆ. ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಕ್ಯಾರೇ ಎನ್ನದ ಅಧಿಕಾರಿಗಳ ನಡೆ ಖಂಡಿಸಿ ಪ್ರಯಿಭಟನೆ, ಮುತ್ತಿಗೆಹಾಕುವುದು ಅನಿವಾರ್ಯವಾಗಿದ್ದು, ಹನಿ ನೀರಿಗೂ ನಾವು ಪರದಾಡುತ್ತಿದ್ದೇವೆಂದು ಅಧಿಕಾರಿಗಳೆದುರು ಅಲವತ್ತುಕೊಂಡರು.

ಸುಂದ್ರವ್ವ ಮಾಲಗಾವಿ, ಶೇಖವ್ವ ಮೂಡಲಗಿ, ಪ್ರಭು ಮಾಲಗಾಂವಿ, ಶಂಕರ ತೊದಲಬಾಗಿ, ಈಶ್ವರ ಅಥಣಿ, ಮೈಬೂಬ ಗಂಜಿ, ಮಹಾಂತೇಶ ರಾವಳ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

> ಕಲ್ಲಟ್ಟಿ ಗಲ್ಲಿಯ ಕಾಮನಕಟ್ಟೆ ಬಳಿಯ (ಮೂಲಿಗೆ)ರುವ ಕೊಳವೆಭಾವಿ ಸಂಪರ್ಕವನ್ನು ಶುಕ್ರವಾರದಂದು ವಾಟರ್‌ಮ್ಯಾನ್‌ಗಳೊಡನೆ ಪರಿಶೀಲಿಸಿ ಸಮಸ್ಯೆ ಪರಿಹರಿಸಲಾಗುವುದು. ವಾರ್ಡಗ್ ಹೊಸ ಕೊಳವೆಭಾವಿ ಕೊರೆಸಲು ಕ್ರಿಯಾಯೋಜನೆ ರೂಪಿಸಲಾಗಿದೆ. ಸದ್ಯ ವಾರಕ್ಕೊಮ್ಮೆ ನೀರು ಪೂರೈಕೆಯಾಗುತ್ತಿರುವುದರಿಂದ ಸಮಸ್ಯೆ ತಲೆದೋರಿದೆ.
>
> • **ಎಫ್.ಬಿ.ಗಿಡ್ಡಿ** ಮುಖ್ಯಾಧಿಕಾರಿಗಳು ಪುರಸಭೆ, ತೇರದಾಳ

ಗುಳೇದಗುಡ್ಡ ಪುರಸಭೆ : ₹7.22 ಲಕ್ಷ ಉಳಿತಾಯ ಬಜೆಟ್ ಅಂಗೀಕಾರ

₹31.11 ಕೋಟಿ ಆದಾಯ, ₹31.04 ಕೋಟಿ ವೆಚ್ಚದ ನಿರೀಕ್ಷಿತ ಬಜೆಟ್ ಮಂಡನೆ|ಆಡಳಿತಾಧಿಕಾರಿ ಎಸಿ ಸಂತೋಷ ಜಗಲಾಸರ ಅನುಮೋದನೆ

• **ಕನ್ನಡಪ್ರಭ ವಾರ್ತೆ** ಗುಳೇದಗುಡ್ಡ



2026-27ನೇ ಸಾಲಿನ ಆಯ-ವ್ಯಯ ತಯಾರಿಕೆಯ ಪೂರ್ವಭಾವಿಯಾಗಿ ಸಾರ್ವಜನಿಕ ಸಮಾಲೋಚನಾ ಸಭೆ ನಡೆಸಿ ಸಾರ್ವಜನಿಕರ ಸಲಹೆ, ಸೂಚನೆಗಳನ್ನು ಗಮನಿಸಿ ವಿಶೇಷ ಯೋಜನೆಗಳನ್ನು ಈ ಬಜೆಟ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ.

ಎಲ್ಲಾ ಮೂಲಗಳಿಂದ ₹3,111.20 ಲಕ್ಷಗಳ ಆದಾಯ ಮತ್ತು 3,104.07 ಲಕ್ಷದಷ್ಟು (₹31.11 ಕೋಟಿ ಆದಾಯ, ₹31.04 ಕೋಟಿ ವೆಚ್ಚ) ವೆಚ್ಚವನ್ನು ಅಳವಡಿಸಿಕೊಂಡು ₹7.22 ಲಕ್ಷಗಳ ಒಟ್ಟು ನಿರೀಕ್ಷಿತ ಉಳಿತಾಯ ಬಜೆಟ್ ಮಂಡಿಸಿದ್ದು, ಇದಕ್ಕೆ ಪುರಸಭೆಯ ಆಡಳಿತಾಧಿಕಾರಿಗಳಾಗಿರುವ ಬಾಗಲಕೋಟೆಯ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ಅವರ ಅನುಮೋದನೆಯೂ ದೊರೆತಿದೆ ಪುರಸಭೆ ಮುಖ್ಯಾಧಿಕಾರಿ ಎ.ಎಚ್. ಮುಜಾವರ ತಿಳಿಸಿದ್ದಾರೆ.

ಬುಧವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಚುನಾವಣೆ ನೀತಿ ಸಂಹಿತೆ ಇರುವುದರಿಂದ ಬಜಟ್ ಪ್ರಕಟಣೆ ನೀಡಿರಲಿಲ್ಲ. ಹೀಗಾಗಿ ಬಜೆಟ್ ಅನುಮೋದನೆ ತಡವಾಗಿ ಸಿಕ್ಕಿದೆ ಎಂದರು.

ಆದಾಯದ ಮೂಲಗಳು: ಪಟ್ಟಣದ ಪುರಸಭೆಯ 2026-27ನೇ ಸಾಲಿನ ಆಯವ್ಯಯದ ಆದಾಯದ ತೆರಿಗೆ ಮೂಲಗಳಾದ ಕಟ್ಟಡ ಆಸ್ತಿ ತೆರಿಗೆ ಮೂಲಕ ₹1.20 ಕೋಟಿ, ಅಂಗಡಿ ಮಳಿಗೆಗಳ ಬಾಡಿಗೆಯಿಂದ ₹60 ಲಕ್ಷ, ಘನತ್ಯಾಜ್ಯ ನಿರ್ವಹಣಾ ಶುಲ್ಕದಿಂದ ₹22 ಲಕ್ಷ, ನೀರಿನ ಶುಲ್ಕದಿಂದ ₹80 ಲಕ್ಷ, ಮುಖ್ಯ ಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳ ಅನುದಾನ ₹4 ಕೋಟಿ, ಸರಕಾರದ ಎಸ್.ಎಫ್.ಸಿ. ವೇತನ ₹3. 25 ಕೋಟಿ, ವಿದ್ಯುತ್ ಅನುದಾನ ₹2.63 ಕೋಟಿ, 16ನೇ ಹಣಕಾಸು ಯೋಜನೆಯಿಂದ ₹2.90 ಕೋಟಿ, ಸ್ವಚ್ಛ ಭಾರತ ಮಿಷನ್ ಯೋಜನೆಯ ಅನುದಾನದಿಂದ ₹1.50 ಕೋಟಿ ಹೀಗೆ ಒಟ್ಟು 21 ಆದಾಯದ ಮೂಲಗಳಿಂದ ₹31.11 ಕೋಟಿ ಆದಾಯವನ್ನು 12 ವಿವಿಧ ಅನುದಾನ ಮತ್ತು ಯೋಜನೆಗಳಿಂದ ನಿರೀಕ್ಷಿಸಲಾಗಿದೆ. ಇವುಗಳಲ್ಲದೇ 5 ಮೀಸಲು ನಿಧಿಗಳು ಇವೆ.

ಪ್ರಮುಖ ವೆಚ್ಚಗಳು : ಇದರಲ್ಲಿ ಒಟ್ಟು 43 ವೆಚ್ಚದ ಕಾಮಗಾರಿಗಳನ್ನು ಪುರಸಭೆ ಹಾಕಿಕೊಂಡಿದೆ. ಅವುಗಳಲ್ಲಿ ಪಟ್ಟಣದ ರಸ್ತೆಗಳ ನಿರ್ಮಾಣ ಕಾಮಗಾರಿಗೆ ₹3.5 ಕೋಟಿ, ಒಳಚರಂಡಿ, ರಸ್ತೆಗಳ ದುರಸ್ತಿ ಕಾಮಗಾರಿಗೆ ₹12 ಲಕ್ಷ, ಒಳಚರಂಡಿ ನಿರ್ಮಾಣ ಕಾಮಗಾರಿಗೆ ₹1.5 ಕೋಟಿ ಪೌರ ಕಾರ್ಮಿಕರ ವಿಶ್ರಾಂತಿ ಗೃಹ ನಿರ್ಮಾಣಕ್ಕೆ ₹20 ಲಕ್ಷ, ಹೊಸಪೇಟೆ ವೃತ್ತ, ಬನ್ನಿಕಟ್ಟಿಯಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣಕ್ಕೆ ₹1 ಕೋಟಿ.

ನೀರು ಸರಬರಾಜು ಹೊರಗುತ್ತಿಗೆ ಕಾರ್ಮಿಕರ ವೇತನ ₹80 ಲಕ್ಷ, ಪಟ್ಟಣದ ಬೀದಿ ದೀಪಗಳು, ನೀರು ಸರಬರಾಜು ವಿದ್ಯುತ್ತ ವೆಚ್ಚ ₹4.58 ಕೋಟಿ ಹೀಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ₹31.04 ಕೋಟಿಯನ್ನು ವೆಚ್ಚಕ್ಕೆ ಅಳವಡಿಸಿಕೊಳ್ಳಲಾಗಿದೆ. ಹೀಗಾಗಿ ಎಲ್ಲಾ ಮೂಲಗಳಿಂದ ₹31.11 ಕೋಟಿಗಳ ಆದಾಯ ಮತ್ತು ₹31.04 ಕೋಟಿಗಳ ವೆಚ್ಚ ಅಳಡಿಸಿಕೊಂಡು ₹7.22 ಲಕ್ಷಗಳ ಉಳಿತಾಯವನ್ನು ಪ್ರಸಕ್ತ ಸಾಲಿನಲ್ಲಿ ಪುರಸಭೆ ನೀರಿಕ್ಷಿಸಲಾಗಿದೆ ಎಂದು ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಕಪ್ಪಲಪಡೆವ್ವ ನಗರ ಸಮಸ್ಯೆ ಬಗೆಹರಿಸಲು ಸಚಿವರಿಗೆ ಮನವಿ

ಜಮಖಂಡಿ; ನಗರದ 13ನೇ ವಾರ್ಡ ಪ್ರದೇಶದ ವ್ಯಾಪ್ತಿಗೆ ಬರುವ ಕಪ್ಪಲಪಡೆವ್ವ ನಗರದಲ್ಲಿ ವಾಸಿಸುವ ಜನರಿಗೆ ಮನೆ ಕಟ್ಟಿಕೊಳ್ಳಲು ಸಮಸ್ಯೆಯಾಗುತ್ತಿದ್ದು, ಮನೆ ಕಟ್ಟಿಕೊಳ್ಳಲು ಸರಕಾರದಿಂದ ಅಗತ್ಯ ಸಹಾಯ ಒದಗಿಸುವಂತೆ ಮಾಜಿ ಶಾಸಕ ಆನಂದ ನ್ಯಾಮಗೌಡ ಮನವಿ ಮಾಡಿದರು. ಈಚೆಗೆ ನಗರಕ್ಕೆ ಭೇಟಿ ನೀಡಿದ್ದ ಅರಣ್ಯ ಇಲಾಖೆ ಸಚಿವ ಈಶ್ವರ ಖಂಡ್ರೆ ಅವರಿಗೆ ನಿವಾಸಿಗಳ ಸಮಸ್ಯೆ ವಿವರಿಸಿ ಹಕ್ಕುಪತ್ರ ವಿತರಿಸಲು ಅಗತ್ಯ ಕ್ರಮ ಜರುಗಿಸುವಂತೆ ಮನವಿ ಮಾಡಿದರು. ಮನವಿ ಸ್ವೀಕರಿಸಿದ ಸಚಿವರು ಅಗತ್ಯ ಪರವಾನಗಿ ಕೊಡಿಸುವ ಭರವಸೆ ನೀಡಿದರು.



10ರಂದು ಭೀಮೋತ್ಸವ -2026 ಅದ್ದೂರಿ ಆಚರಣೆ: ಗೊಂಬಿಗುಡ್ಡ

ರಬಕವಿ-ಬನಹಟ್ಟಿ: ಮೇ 10ರ ಸಂಜೆ 5 ಗಂಟೆಗೆ ಅಂಬೇಡ್ಕರ್‌ಸೇನೆ ಉತ್ತರ ಕರ್ನಾಟಕ ಸಮಿತಿಯ ವತಿಯಿಂದ ಬನಹಟ್ಟಿಯ ಈಶ್ವರಲಿಂಗ ಮೈದಾನದಲ್ಲಿ ಡಾ.ಬಾಬಾಸಾಹೇಬರ 135ನೇ ಜಯಂತಿ ನಿಮಿತ್ತ ಭೀಮೋತ್ಸವ-2026 ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಲು ನಿರ್ಧರಿಸಲಾಗಿದೆ ಎಂದು ಸೇನೆಯ ಉತ್ತರ ಕರ್ನಾಟಕ ಸಮಿತಿಯ ಅಧ್ಯಕ್ಷ ಶಿವಲಿಂಗ ಗೊಂಬಿಗುಡ್ಡ ತಿಳಿಸಿದ್ದಾರೆ. ನವನಗರದ ಧಮ್ಮಪಾಲ ಬಂತೇಜಿ ಸಾನ್ನಿಧ್ಯ ವಹಿಸಲಿದ್ದು, ಕೊಳಗೇರಿ ಅಭಿವೃದ್ಧಿ ನಿಗಮ ಅಧ್ಯಕ್ಷ, ಶಾಸಕ ಪ್ರಸಾದ ಅಬ್ಬಯ್ಯ ಉದ್ಘಾಟಿಸಲಿದ್ದು, ಸೇನೆಯ ರಾಜ್ಯ ಸಂಸ್ಥಾಪಕ ಅಧ್ಯಕ್ಷ ಡಾ.ಪಿ.ಮೂರ್ತಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ, ಅಬಕಾರಿ ಸಚಿವ ಆರ.ಬಿ. ತಿಮ್ಮಾಪುರ, ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ವರಿಷ್ಠ ಸಿದ್ದು ಕೊಣ್ಣೂರ, ಕೆಪಿಸಿಸಿ ಮಹಿಳಾ ಪ್ರಧಾನ ಕಾರ್ಯದರ್ಶಿ ವೀಣಾ ಕಾಶಪ್ಪನವರ ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಪವರ್‌ಆಫ್ ಬಾಬಾಸಾಹೇಬ್ ವಿಷಯದ ಮೇಲೆ ಕಲಬುರ್ಗಿಯ ಡಾ.ವಿಠಲ ವಗ್ಗನ್ ಉಪನ್ಯಾಸ ನೀಡಲಿದ್ದಾರೆ. ಬೆಳಗಾವಿಯ ಡಾ.ಸಾಹುಕಾರ ಕಾಂಬ್ಳೆ ಆಗಮಿಸಲಿದ್ದಾರೆ. 11ರಂದು ಸಂಜೆ 5 ಗಂಟೆಗೆ ಡಾ.ಬಾಬಾಸಾಹೇಬ್‌ರ ಪುತ್ಥಳಿಯ ಭವ್ಯ ಮೆರವಣಿಗೆ ಬನಹಟ್ಟಿ ಸಹಕಾರಿ ನೂಲಿನ ಗಿರಣಿಯಿಂದ ರಬಕವಿ-ಬನಹಟ್ಟಿ ಸರ್ಕಾರಿ ಸಮುದಾಯ ಆರೋಗ್ಯಕೇಂದ್ರದ ವರೆಗೆ ನಡೆಯಲಿದೆಯೆಂದು ಶಿವಲಿಂಗ ಗೊಂಬಿಗುಡ್ಡ ತಿಳಿಸಿದ್ದಾರೆ.